# 17

# ರೋಧಿಸಿದ ಮನುಷ್ಯನು

## (2 ಅರಸು 8:7-10:36)

ಸೊಲೋಮೋನನು "ಅಳುವ ಸಮಯ, ಮತ್ತು ನಗುವ ಸಮಯ" ಇದೆ ಎಂದು ಹೇಳಿ ದ್ದಾನೆ (ಪ್ರಸಂಗಿ 3:4ಎ). ನಿಯಮದ ಪ್ರಕಾರ ಯೆಹೋವನು ತನ್ನ ಜನರು ಸಂತೋಷದಿಂದ ಇರಬೇಕೆಂದು ಬಯಸುವವನಾಗಿದ್ದಾನೆ (ಕೀರ್ತನೆ 32:11; ಫಿಲಿಪ್ಪಿ 4:4); ಆದರೆ ದುಃಖದಿಂದ ಇರುವುದಕ್ಕೂ ಯೋಗ್ಯವಾದ ಸಮಯವೂ ಇದೆ (ಮತ್ತಾಯ 5:4; ರೋಮಾಪುರ 12:15). ವಾಸ್ತವವಾಗಿ ಸಂತೋಷದಿಂದ ಇರುವುದಕ್ಕೂ ಅಯೋಗ್ಯವಾದ ಸಮಯಗಳು ಸಹ ಅಲ್ಲಿವೆ.

ಯೆರಮೀಯನು ದೇವ ಜನರ ಪಾಪಮಯತೆಗಾಗಿ ಮತ್ತು ಯೆರೂಸಲೇಮಿನ ವಿನಾಶನದ ತರುವಾಯ ಅತ್ತನು (ಯೆರಮೀಯ 9:1; ಪ್ರಲಾಪಗಳು). ತನ್ನ ಮಿತ್ರನು ಮರಣಹೊಂದಿದಾಗ ಯೇಸು ಅತ್ತನು (ಯೋಹಾನ 11:35), ಯೆರೂಸಲೇಮಿನ ವಿಧಿಯನ್ನು ಆಲೋಚಿಸುವಾಗ (ಲೂಕ 19:41-44), ಹಾಗೂ ಆತನು ಶಿಲುಬೆಯನ್ನು ಎದುರಿಸುವಾಗ (ಇಬ್ರಿಯ 5:7) ಆತನು ಅತ್ತನು. ಪೌಲನು ಕೊರಿಂಥದವರಿಗೆ "ಬಲು ಕಣ್ಣೀರಿನಿಂದ" ಬರೆದನು (2 ಕೊರಿಂಥ 2:4).

ಈ ಮಂಡನೆಯ ವೇದ ಭಾಗದಲ್ಲಿ ನಾವು ಓದುವುದೇನೆಂದರೆ "ದೇವರ ಮನುಷ್ಯನು ಅತ್ತನು" (2 ಅರಸು 8:11ಬಿ). ಈ ಪಾಠದಲ್ಲಿ, ಎಲೀಷನ ಬಲುದೂರದ ಪ್ರಭಾವವನ್ನು ನಾವು ನೋಡುವವರಾಗಿದ್ದೇವೆ ಅವುಗಳು, ಆತನು ರಾಜಕೀಯ ಶಕ್ತಿಯನ್ನು ಹೊಂದಿದ್ದನು, ಎರಡು ರಾಷ್ಟ್ರಗಳ ಅರಸರನ್ನು ಅಧಿಕಾರಕ್ಕೆ ತರುವ ಶಕ್ತಿಯನ್ನು ಹೊಂದಿದ್ದನು. ಇಸ್ರಾಯೇಲ್ಯರ ಮೇಲೆ ಬೀಳುವ ದೊಡ್ಡ ದುರಂತಕ್ಕೆ ಹೋಲಿಸಿದರೆ ಆ ಪ್ರವಾದಿಗೆ ಇದೇನು ದೊಡ್ಡದಲ್ಲ (ವಚನ 12). ಆತನ ಪ್ರಯತ್ನದ ನಂತರವೂ, ರಾಜ್ಯ ಮತ್ತು ಅದರ ನಾಯಕರುಗಳು ದೇವರ ವಿರುದ್ಧ ಬಂಡೇಳುವುದಕ್ಕೆ ಪಟ್ಟು ಹಿಡಿದಾಗ - ಆತನ ಹೃದಯವು ಒಡೆದುಹೋಯಿತು.

ಈ ಅಭ್ಯಾಸವು 2 ಅರಸು 8-10 ಅಧ್ಯಾಯಗಳಿಂದ, ತೆಗೆದುಕೊಳ್ಳಲ್ಪಟ್ಟಿದ್ದು ಅದು ಎಲೀಷನ ಮುಂದಿನ ಸೇವೆಯ ಬಗೆಗೆ ಹೊಂದಿರುವುದಾಗಿದೆ. ಇದು ಇಸ್ರಾಯೇಲ್ಯಿನ ಸಮಯದಲ್ಲಿನ ರಕ್ತಮಯ ಅವಧಿಯಾಗಿದ್ದು, ಅಂಥ ಅನೇಕ ಘಟನೆಗಳನ್ನು ಹೊಂದಿದ್ದ ಇದು ಯಾವುದೇ ಹೆಂಗರುಳಿನವರು ಅಳುವುದಕ್ಕೆ ಕಾರಣವಾಗಿದೆ.

## ನ್ಯಾಯದ ಎರಡು ಕತ್ತಿಗಳು (8:7-10:36)

### ಹಜಾಯೇಲನ ಕತ್ತಿ

ಕಥೆಯು ಆಶ್ಚರ್ಯಯುತವಾದ ಈ ಪದಗಳಿಂದ ಆರಂಭವಾಗುತ್ತದೆ "ಒಂದಾನೊಂದು ಸಮಯದಲ್ಲಿ ಎಲೀಷನು ದಮಸ್ಕಕ್ಕೆ ಹೋದನು" (8:7ಎ). ದಮಸ್ಕವು ಇಸ್ರಾಯೇಲ್ಯರ ಬಹುಕಾಲದ ಶತ್ರುವಾಗಿದ್ದ ಅರಾಮ್ಯದ ರಾಜಧಾನಿಯಾಗಿತ್ತು. ಇದು ದಮಸ್ಕದಲ್ಲಿದ್ದು ಒಂದು ಸಮಯದಲ್ಲಿ ಎಲೀಷನನ್ನು ಸೆರೆಹಿಡಿಯುವದನ್ನು ಮತ್ತು ಬಹುಶಃ ಕೊಲ್ಲಲು ಯೋಜನೆಯನ್ನೂ ಮಾಡಲಾಗಿತ್ತು (ನೋಡಿರಿ 6:8-13). ಈಗ ಪ್ರವಾದಿಯು ಎದೆಗಾರಿಕೆಯಿಂದ ನಗರದಲ್ಲಿ ನಡೆದು ಬಂದನು.

ಆತನು ಅಲ್ಲಿ ಇದ್ದದ್ದು ಏಕೆ? ಬಹುಶಃ ಆತನು ನಾಮಾನನನ್ನು ಭೇಟಿಯಾಗಿ ಆತನು ಮಾಡಿದಂತಹ ನಿರ್ಧಾರದಲ್ಲಿ ನಂಬಿಗಸ್ತನಾಗಿ ಉಳಿಯುವಂತೆ ಪ್ರೋತ್ಸಾಹಿಸುವ ನಿರೀಕ್ಷೆಯನ್ನು ಆತನು ಹೊಂದಿರಬಹುದು (5:15, 17), ಆದರೆ ಆತನ ಪ್ರಥಮ ಉದ್ದೇಶವು ಬಲು ಸಮಯದ ಹಿಂದೆ ಕೊಡಲ್ಪಟ್ಟ ದಿವ್ಯ ನಿಯೋಗವನ್ನು ಪರಿಪೂರ್ಣಗೊಳಿಸುವುದೇ ಆಗಿತ್ತು. ಅದು ಹೊರೆಬ ಬೆಟ್ಟದಲ್ಲಿ, ಯೆಹೋವನು ಎಲೀಷನ ಪೂರ್ವಾಧಿಕಾರಿಯಾದ ಎಲೀಯನಿಗೆ ಕೊಟ್ಟಂತಹದ್ದು,

> ... ನೀನು ಬಂದ ದಾರಿಯಿಂದ ಹಿಂದಿರುಗಿ ದಮಸ್ಕದ ಅರಣ್ಯಕ್ಕೆ ಹೋಗು; ಅಲ್ಲಿಂದ ಪಟ್ಟಣದೊಳಗೆ ಪ್ರವೇಶಿಸಿ ಹಜಾಯೇಲನನ್ನು ಅರಾಮ್ಯರ ಅರಸನನ್ನಾಗಿ ಅಭಿಷೇಕಿಸು; ನಿಂಷಿಯ ಮಗನಾದ ಯೇಹುವನ್ನು ಇಸ್ರಾಯೇಲ್ಯರ ಅರಸನನ್ನಾಗಿಯೂ ಅಬೇಲ್‌ಮೆ ಹೋಲಲದವನೂ ಶಾಫಾಟನ ಮಗನೂ ಆದ ಎಲೀಷನನ್ನು ನಿನಗೆ ಬದಲಾಗಿ ಪ್ರವಾದಿಯನ್ನಾಗಿ ಅಭಿಷೇಕಿಸು. ಹಜಾಯೇಲನ ಕತ್ತಿಗೆ ತಪ್ಪಿಸಿಕೊಂಡವರನ್ನು ಯೇಹುವು ಕೊಲ್ಲುವನು; ಇವನ ಕತ್ತಿಗೆ ತಪ್ಪಿಸಿಕೊಂಡವರನ್ನು ಎಲೀಷನು ಕೊಲ್ಲುವನು (1 ಅರಸು 19:15-17).

ನಮ್ಮ ಸರಣಿಯ ಮೊದಲ ಪಾಠದಲ್ಲಿ ಎಲೀಯನು ನಿಯೋಗದ ಮೂರನೆಯ ಭಾಗವನ್ನು ತೆಗೆದುಕೊಳ್ಳವುದನ್ನು ನಾವು ನೋಡುತ್ತೇವೆ: ಅದು ಎಲೀಷನ ಪವಿತ್ರ ಸೇವೆಗಾಗಿ ತೆಗೆದಿಡುವುದೇ ಆಗಿತ್ತು. ಎಲೀಯನು ಒಂದು ಮತ್ತು ಎರಡನೆಯ ಭಾಗಗಳನ್ನು ತಕ್ಷಣವೇ ಯಾಕೆ ತೆಗೆದುಕೊಳ್ಳಲಿಲ್ಲ? ಪ್ರತ್ಯಕ್ಷವಾಗಿ, ಆತನ ಸೇವೆಯ ಆರಂಭದಲ್ಲಿ ಹಜಾಯೇಲ ಮತ್ತು ಯೇಹುವನ್ನು ಅಭಿಷೇಕಿಸುವದು ಸರಿಯಾಗಿರಲಿಲ್ಲ. ಆತನಿಗೆ ವಿಧಿಸಿದ ಕೆಲಸವು ಎಲೀಷನಿಗೆ ವರ್ಗಾಯಿಸಲ್ಪಟ್ಟಿತು. ಮೊದಲ ಆಜ್ಞೆಯು "... ದಮಸ್ಕದ ಅರಣ್ಯಕ್ಕೆ ಹೋಗು ... ಹಜಾಯೇಲನನ್ನು ಅಭಿಷೇಕಿಸು" (1 ಅರಸು 19:15). ಈ ಸಮಯವು ಅದನ್ನು ನೆರವೇರಿಸುವ ಸಮಯವಾಗಿತ್ತು ಆದ್ದರಿಂದ ಎಲೀಷನು ದಮಸ್ಕಕ್ಕೆ ಪ್ರಯಾಣಿಸಿದನು.

ಇದು ಸಂಭವಿಸಿದ್ದು "ಅರಾಮ್ಯರ ಅರಸನಾದ ಬೆನ್ಹದದನು ಅಸ್ವಸ್ಥನಾದಾಗ" (2 ಅರಸು 8:7ಬಿ), ಅದು ಯಾವ ರೀತಿಯ ಅಸ್ವಸ್ಥತೆ ಎಂದು ನಮಗೆ ಹೇಳಲ್ಪಟ್ಟಿಲ್ಲ. ಅದು ಯಾವುದೇ ಅಸ್ವಸ್ಥತೆಯಾಗಿರಲಿ, ಜೀವಭಯದ ಆ ರೋಗವು ಬಲು ಗಂಭೀರವಾಗಿತ್ತು.

ಒಬ್ಬ ದೂತನು "ದೇವರ ಮನುಷ್ಯನು ಬಂದಿದ್ದಾನೆ" (8:7ಸಿ). ಎಂಬ ಮಾಹಿತಿಯನ್ನು ನೀಡಿದನು. ಇತ್ತೀಚೆಗೆ ಅರಸನು "ಎಲೀಷನನ್ನು ಹಿಡಿಯಿರಿ ಮತ್ತು ಆತನ ತಲೆಯನ್ನು ತನ್ನಿರಿ!" ಎಂದು ಹೇಳಿದ್ದನು. ಈಗ ಹೇಗೋ, ಆತನು ಯುದ್ಧದ ಯೋಜನೆಗಳ ಬಗೆ ಗಮನಕೊಡುವಂತಹ ಪ್ರಚಂಡನಾದ ದಂಡನಾಯಕನಾಗಿ ಉಳಿದಿರಲಿಲ್ಲ. ಈಗ ಆತನು ಅಸ್ವಸ್ಥನಾದ ವೃದ್ಧನಾಗಿದ್ದನು. ಅಸ್ವಸ್ಥತೆಯು ವ್ಯಕ್ತಿಯ ನಿಲುವನ್ನೇ ಬದಲಾಯಿಸುತ್ತದೆ (ಕೀರ್ತನೆ 119:71).

ಎಲೀಷನ ಅದ್ಭುತವಾದ ಸಾಮರ್ಥ್ಯವು ಅರಸನಿಗೆ ತಿಳಿದಿತ್ತು; ಈ ಹಿಂದೆ ಅವರು ಆತನನ್ನು ಅನೇಕ ಸಾರಿ ಅಡ್ಡಿಪಡಿಸಿದ್ದರು (2 ಅರಸು 6:8-23). ಹಾಗೇಯೆ ನಾಮಾನನು ಸಹ ಅನೇಕ ಸಾರಿ ತನ್ನ ಸ್ವಸ್ಥತೆಯಿಂದ ಈ ಕಥೆಗೆ ಸಂಬಂಧಿತನಾಗಿದ್ದಾನೆ. ಆಗ ಅರಸನು ತನ್ನ ನಂಬಿಕೆಯ ಸೇವಕನಾದ ಹಜಾಯೇಲನನ್ನು ಕರೆಯಿಸಿದನು (ದೇವರು ಎಲೀಯನಿಗೆ ಸೂಚಿಸಿದಂತಹ ಮನುಷ್ಯನೇ ಈತನು). ಆತನು ಹಜಾಯೇಲನಿಗೆ, "ನೀನು ಕಾಣಿಕೆಯನ್ನು ತೆಗೆದುಕೊಂಡು ದೇವರ ಮನುಷ್ಯನ ಬಳಿಗೆ ಹೋಗು" (8:8ಎ) ಎಂದು ಹೇಳಿದನು.

ಈ ಹಿಂದೆ ಅರಸನು ನಾಮಾನನಿಂದ ಅನೇಕ ಬೆಲೆಯುಕ್ತ ಕಾಣಿಕೆಗಳನ್ನು ಕಳುಹಿಸಿದ್ದನು: ಈಗ ತಾನೇ ಸ್ವಂತವಾಗಿ ಕಳುಹಿಸುತ್ತಿದ್ದಾನೆ. ತಾತ್ವಿಕವಾಗಿ, ಇಂಥ ಕಾಣಿಕೆಗಳು ವಿಗ್ರಹದ ದೇವರಿಗೆ ಅರ್ಪಿಸಲಾಗುತ್ತಿತ್ತು; "ವಾಸ್ತವವಾಗಿ, ಅವರು ಸುಳ್ಳು

ಪ್ರವಾದಿಗಳಿಗೆ ಮತ್ತು ಪೂಜಾರಿಗಳಿಗೆ ಲಂಚಕೊಡುತ್ತಿದ್ದರು. ಹೆಚ್ಚಾಗಿ ದೊಡ್ಡ ಕಾಣಿಕೆಯನ್ನು, ಕೊಟ್ಟವನು ಬಲು ಅನುಕೂಲವಾದ ದಿವ್ಯದರ್ಶನವನ್ನು" ಹೊಂದುತ್ತಿದ್ದನು. ನಾನು ಅರಸನ ಕಾಣಿಕೆಯ ಬಗೆಗೆ ಕೇಳಿದ್ದೇನೆ ನನಗೆ ಒಂದು ಆಶ್ಚರ್ಯವೆಂದರೆ ನಾಮಾನನು ಗೇಹಜಿಯ ವಿನಂತಿಯ (ಸುಳ್ಳಿನ) ಬಗೆಗೆ ಅರಸನಿಗೆ ಹೇಳಿರಬಹುದು, ಅಂಥ ಕಾಣಿಕೆಗಳನ್ನು ಎಲೀಷನು ತೆಗೆದುಕೊಳ್ಳಲು ಬಯಸುತ್ತಾನೆ ಎಂಬುದನ್ನು ಇದು ಸೂಚಿಸುವುದಾಗಿದೆ.

ಅರಸನು ಹಜಾಯೇಲನಿಗೆ, "ತನಗೆ ವಾಸಿಯಾಗುವದೋ ಇಲ್ಲವೋ" ಎಂಬುದನ್ನು ಎಲೀಷನ ಮೂಲಕ, "ಯೆಹೋವನ ಸನ್ನಿಧಿಯಲ್ಲಿ ವಿಚಾರಿಸಲು ಹೇಳುತ್ತಾನೆ?" (8:8ಬಿ). ಬಹುಶಃ ಅರಸನು ಈಗಾಗಲೇ ತನ್ನ ವಿಗ್ರಹದ ದೇವರುಗಳನ್ನು ವಿಚಾರಿಸಿದ್ದಿರಬಹುದು (ನೋಡಿರಿ 5:18) ಆದರೆ ಅಲ್ಲಿ ಸಂತೃಪ್ತತೆಯ ಸಿಕ್ಕಿರಲಿಲ್ಲ.

ಒಂದು ಅದ್ಭುತವಾದ ಉಡುಗೊರೆಯು ಅಲ್ಲಿತ್ತು: "ದಮಸ್ಕದ ಶ್ರೇಷ್ಟ ವಸ್ತುಗಳಲ್ಲಿ ನಾಲ್ವತ್ತು ಒಂಟೆಗಳು ಹೊರುವಷ್ಟನ್ನು ತೆಗೆದುಕೊಂಡು ಎಲೀಷನ ಬಳಿಗೆ ಹೋದನು" (8:9ಬಿ). ದಮಸ್ಕವು ಈಜಿಪ್ಟ್, ಏಷಿಯಾ ಮೈನರ್, ಮತ್ತು ಮೇಸಪೋಟೋಮಿಯಾಗಳ ಮಧ್ಯೆ ಇರುವಂಥ ವ್ಯಾಪಾರಿ ಕೇಂದ್ರವಾಗಿತ್ತು, ಹೀಗಾಗಿ "ಒಳ್ಳೇಯ ಸಂಗತಿಗಳು" ಅಲ್ಲಿ ಒಳ್ಳೇ ಯದನ್ನು ಸೂಚಿಸುವ; ಅಮೂಲ್ಯ ವಸ್ತುಗಳು, ಶ್ರೇಷ್ಟ ಬಟ್ಟೆಗಳು, ಬಹಳ ಬೆಲೆಯುಳ್ಳ ಕಸೂತಿಯ ಬಲು ಆಕರ್ಷಕವಾದ ವಿದೇಶಿ ಆಹಾರಗಳು ಮತ್ತು ಪಾನೀಯಗಳು ಎಲ್ಲವೂ ಅಲ್ಲಿದ್ದವು. ಬಲು ಮೆಚ್ಚಿಕೆಯಾದಂತಹ ಉಡುಗೊರೆಯು ಅದಗಿತ್ತು ಎಂಬುದನ್ನು ಊಹಿಸಿಕೊಳ್ಳುವದು ಕಠಿಣ ವಾದುದ್ದು ಆಗಿದೆ, ಆದರೆ ಅಲ್ಲಿ ಆತನು ತಲುಪಿದಾಗ ಎಲೀಷನು ಅದನ್ನು ಸ್ವೀಕರಿಸಿದನು ಎಂಬುದಕ್ಕೆ ಯಾವ ಸೂಚನೆಯೂ ಇಲ್ಲ.

ಹಜಾಯೇಲನು "ಎಲೀಷನ ಬಳಿಗೆ ಬಂದನು" (8:9ಎ). ಆತನ ಮುಂದೆ ನಿಂತನು, ಮತ್ತು ಹೇಳಿದನು, "ನಿನ್ನ ಮಗನೂ ಅರಾಮ್ಯರ ಅರಸನೂ ಆದ ಬೆನ್ಹದದನು ತನಗೆ ಸ್ವಸ್ಥವಾ ಗುವದೋ ಇಲ್ಲವೋ ಎಂಬುದನ್ನು ವಿಚಾರಿಸುವುದಕ್ಕೆ ನನ್ನನ್ನು ನಿನ್ನ ಹತ್ತಿರ ಕಳುಹಿಸಿದ್ದಾನೆ?" (8:9ಸಿ). "ನಿನ್ನ ಮಗನು" ಎಂಬ ಪದವು ಗೌರವಯುಕ್ತವಾದದ್ದು, ಆದರೆ ಇದೂ ಸಹ ಅವಲಂಭಿತಕ್ಕೆ ಸೂಚಿತವಾದದ್ದು ಆಗಿದೆ.

ಎಲೀಷನ ಉತ್ತರವು ಪಂಡಿತರನ್ನೂ ಕೂಡ ಆಶ್ಚರ್ಯಕ್ಕೆಡೆ ಮಾಡುತ್ತದೆ: "ಹೇಗೋ, ನಿನ್ನಗೆ ವಾಸಿಯಾಗುವದು[1] ಎಂಬುದಾಗಿ ಬೆನ್ಹದದನಿಗೆ ಹೇಳು; ಆದರೂ ಅವನು ಸತ್ತೇ ಹೋಗುವನೆಂದು ಯೆಹೋವನು ನನಗೆ ತಿಳಿಸಿದ್ದಾನೆ" (8:10). ಎಲೀಷನ ಮಾತಿನ ಅರ್ಥವೇನು? Burton Coffman ರವರು ಗಮನಿಸುವುದೇನೆಂದರೆ ವಾಕ್ಯದ ನಂತರದ ಭಾಗವು "ಯೆಹೋವನು" ಎಂದು ಹೇಳಲ್ಪಟ್ಟಿದೆ ಆದರೆ ಮೊದಲ ಭಾಗದಲ್ಲಿ ಇಲ್ಲ ಎಂದಿದೆ.[2] ಆತನ ಸಮಾರೋಪವು (ಮತ್ತು ಅನೇಕ ಲೇಖಕನ ಸಮಾರೋಪವೂ ಆಗಿದೆ) ವಾಕ್ಯದ ಮೊದಲ ಭಾಗವು ಸೂಚಿಸುವುದೇನೆಂದರೆ ಹಜಾಯೇಲನು ಅರಸನಿಗೆ ಹೇಳಬೇಕಾದ ಸುಳ್ಳಿನ ಅರಿವನ್ನು ಸಚಿಸುವುದಾಗಿದೆ. ಈ ಅರ್ಥವಿವರಣೆಯನ್ನು ಬಳಸುವುದರಿಂದ, ಎಲೀಷನ ಮಾತಿನಲ್ಲಿ ಈ ರೀತಿಯ ಭಾವಾರ್ಥವಿರಬಹುದು: "ನೀನು ಹೋಗಿ ಅರಸನಿಗೆ ಆತನು ಖಚಿತವಾಗಿ ಗುಣವಾಗುವನು ಎಂದು ಹೇಳು - ನೀನು ಯೋಜಿಸಿದಂತೆಯೂ ಸಹ - ಆದರೆ ಆತನು ನಿಶ್ಚಿತವಾಗಿ ಸಾಯುವನು ಎಂದು ಯೆಹೋವನು ನನಗೆ ತಿಳಿಸಿದ್ದಾನೆ."

ಇನ್ನೊಂದು ಸಾಧ್ಯತೆ ಎಂದರೆ (ನನ್ನನ್ನೂ ಸಹ ಒಳಗೊಂಡು, ಇತರ ಲೇಖಕರಿಂದ ಸೂಚಿಸಲ್ಪಟ್ಟದ್ದು) "ನಾನು ಸ್ವಸ್ಥನಾಗುವೆನೇ?" ಎಂಬ ಆ ಪ್ರಶ್ನೆಗೆ ಎಲೀಷನ ಉತ್ತರವೇ ನೆಂದರೆ "ಹೌದು ಮತ್ತು ಇಲ್ಲ" ಎಂಬುದೇ: "ಹೌದು, ನಿನ್ನ ಅಸ್ವಸ್ಥತೆಯು ಮಾರಕವಾದ ರೋಗವಾಗಿಲ್ಲದಿದ್ದರೆ ನೀನು ಸ್ವಸ್ಥನಾಗುವಿ. ಒಂದು ವೇಳೆ ನೀನಗಿರುವುದರ ಬಗೆಗೆ ಚಿಂತಿಸಿದ್ದೇ ಆದರೆ, ನೀನು ಬದುಕುವಿ. ಇದಲ್ಲದೇ, ಉತ್ತರವು ಇಲ್ಲ ಎಂಬುದಕ್ಕೆ ಕಾರಣ ಯೆಹೋವನು ನೀನು ಸಾಯುವಿ ಎಂದು ತೋರಿಸಿದ್ದಾನೆ." "ಇನ್ನೊಂದು ಮಾತಿನಲ್ಲಿ ಅಸ್ವಸ್ಥತೆಯು

ಅಂತ್ಯವಲ್ಲ, ಆದರೆ ಅರಸನ ಜೀವಿತವು ನಿರ್ನಾಮವಾಗಲಿದೆ."[3]

ವಚನ 11ರಲ್ಲಿ ಇನ್ನೊಂದು ಸವಾಲಿನ ಅರ್ಥವಿವರಣೆಯು ಇದೆ. ವೇದಭಾಗವು ಹೇಳುವುದೇನೆಂದರೆ "ಅವನು ನಾಚಿಕೊಳ್ಳುವ ತನಕ ಸ್ಥಿರ ದೃಷ್ಟಿಯಿಂದ ಅವನನ್ನು ನೋಡಿದನು" (8:11ಎ). ಇಲ್ಲಿ ಎರಡು ಸಾರಿ ಸೂಚಿತವಾದ "ಅವನು" ಎಂಬುದು ಯಾರು ಅನ್ನುವದು ಸ್ಪಷ್ಟವಾಗಿಲ್ಲ. ಕೆಲವರು ಯೋಚಿಸುವುದೇನೆಂದರೆ ಮೊದಲನೆಯ "ಅವನು" ಎಂಬುದು ಎಲೀಷನನ್ನು ಸೂಚಿಸುವುದಾಗಿದೆ, ಎರಡನೆಯ "ಅವನು" ಎಂಬುದು ಹಜಾಯೇಲನನ್ನು ಸೂಚಿಸುವುದಾಗಿದೆ, ಎರಡನೆಯದು ಎಲೀಷನ ಬಗೆಗೆ ಮಾತನಾಡುವುದಾಗಿದೆ (ನೋಡಿರಿ NCV) ಕೆಲವರು "ಅವನು" ಎಂಬ ಎರಡು ಕೂಡ ಎಲೀಷನನ್ನೇ ಸೂಚಿಸುತ್ತವೆ ಅಥವಾ ಎರಡು ಹಜಾಯೇಲನನ್ನೆ ಸೂಚಿಸುತ್ತವೆ. ನನ್ನ ಆಯ್ಕೆಯೆಂದರೆ ಮೊದಲ ಸಾಧ್ಯತೆಯೇ ಸೂಚಿಸಲ್ಪಟ್ಟದ್ದಾಗಿದೆ. CJB ಯು "ದೇವರ ಮನುಷ್ಯನು [ಎಲೀಷನು] ದೃಷ್ಟಿಯಿಟ್ಟು ಆತನನ್ನು [ಹಜಾಯೇಲನನ್ನು] ಒಂದೇ ಸಮನೇ ನೋಡಿದ್ದರಿಂದ ಹಜಾಯೇಲನು ನಾಚಿಕೊಂಡನು" ಎಂದು ಹೊಂದಿದೆ.

ಇಲ್ಲಿ ಸಾಧ್ಯವಿರುವ ಅನುಕ್ರಮಗಳು ಹೀಗಿವೆ: ಬೆನ್ಹದದನು ಮರಣಿಸುವನು ಎಂದು ಯೆಹೋವನು ಹೇಳಿದ್ದನ್ನು ಎಲೀಷನು ಹಜಾಯೇಲನಿಗೆ ತಿಳಿಸಿದನು. ಆತನು ನಂತರ ತಡೆದನು ಮತ್ತು ತಾನು ಎಲ್ಲವನ್ನೂ ಖಚಿತವಾಗಿ ಅರಸನು *ಹೇಗೆ* ಮರಣಹೊಂದುವನು ಎಂಬುದನ್ನು ನಾನು ಬಲ್ಲೆನು ಎಂದು ಸೂಚಿಸುವ ಒಂದು ಅರ್ಥಪೂರ್ಣವಾದ ನೋಟವನ್ನು ಹಜಾಯೇಲನ ಕಡೆಗೆ ಕೊಟ್ಟನು. ಹಜಾಯೇಲನು ಈಗಾಗಲೇ ಅರಸನನ್ನು ಮುಗಿಸಲು ಮಾಡಿದ ಯೋಜನೆಯು, ಬೆಚ್ಚಿಬೀಳಿಸುವಂತಿತ್ತು ಮತ್ತು ಪ್ರವಾದಿಯ ಕಣ್ಣುಗಳಲ್ಲಿ ನೋಡಬಾರದಂತಿತ್ತು.

ಅರಸನು ಮರಣಿಸುವನು ಎಂದು ಎಲೀಷನು ಪ್ರಕಟಿಸಿದ ಕಾರಣ, ಕೆಲ ಲೇಖಕರು ಎಲೀಷನನ್ನು (ಮತ್ತು ದೇವರನ್ನೂ) ಆ ಕೃತ್ಯಕ್ಕೆ ಕಾರಣರನ್ನಾಗಿಸುತ್ತಾರೆ. ಬೆನ್ಹದದನು ಮರಣಿಸುವನು ಎಂದು ದೇವರು ತಿಳಿದಿದ್ದು ನಿಜ (8:10). ಅದಲ್ಲದೆ ಹಜಾಯೇಲನು ಕೈಕೊಳ್ಳಬಹುದಾದ ಕ್ರೂರ ಕರ್ಮಗಳ ಬಗೆಗೂ (8:12), ಮತ್ತು ಎಲೀಷನು ಎರಡೂ ಘಟನೆಗಳನ್ನು ಮುಂಚಿತವಾಗಿ ಘೋಷಿಸುವನು ಎಂದೂ ತಿಳಿದಿದ್ದನು. ಹೇಗೋ, ಈ ಕೆಟ್ಟ ಕೃತ್ಯಗಳ ಬಗೆಗೆ ಅಥವಾ ಯಾರು ತಮ್ಮನ್ನು ತಾವು ಲೆಕ್ಕಕೊಡದಿರುವುದಕ್ಕೆ ಒಪ್ಪಿಸಿಕೊಟ್ಟಿರುತ್ತಾರೋ ಅವುಗಳಿಗೆ ದೇವರು ಮತ್ತು ಎಲೀಷ ಕಾರಣರಲ್ಲ (ನೋಡಿರಿ ಆಮೋಸ 1:3-5). ಹಿಂದಿನ ಪಾಠದಲ್ಲಿ, ಕೆಲವರು ಈ ಹಿಂದೆ ವೈಯಕ್ತಿಕವಾಗಿ ತಮಗೆ ತಿಳಿಯದೆ ಇಚ್ಛಾ ಸ್ವಾತಂತ್ರ್ಯದೊಡನೆ ಮಧ್ಯೆ ಪ್ರವೇಶಿಸಿದ್ದನ್ನು ನಾನು ಬಲ್ಲೆ ಎಂದು ಪ್ರಾರಂಭಿಸಿದ್ದೆನು. ಅದೇ ರೀತಿಯಲ್ಲಿ ಒಬ್ಬ ವ್ಯಕ್ತಿಯು ತನ್ನ ಇಚ್ಛಾ ಸ್ವಾತಂತ್ರ್ಯದೊಡನೆ ಮಧ್ಯೆ ಪ್ರವೇಶಿಸದೆ ಏನನ್ನಾದರು ಮಾಡುವುದನ್ನು ಪವಿತ್ರನಾದ ದೇವರು ಮೊದಲೇ ತಿಳಿದವನಾಗಿದ್ದಾನೆ.

ಎಲೀಷ ಮತ್ತು ಹಜಾಯೇಲರು ಒಬ್ಬರನ್ನೊಬ್ಬರು ನೋಡುತ್ತಾ ನಿಂತಿರುವಾಗ, ಹಜಾಯೇಲನು ಇಸ್ರಾಯೇಲ್ಯರಿಗೆ ಏನು ಮಾಡಬಹುದು ದರ್ಶನವು ಪ್ರವಾದಿಯ ಮನದ ಮೂಲಕ ಹೊಳೆ ಯಿತು. ಆಸಮಯದಲ್ಲಿ "ಪ್ರವಾದಿಯು ಅತ್ತನು" (8:11ಬಿ). ಹಜಾಯೇಲನು "ನನ್ನ ಒಡೆಯಾ, ಯಾಕೆ ಅಳುತ್ತಿ?" (8:12ಎ) ಎಂದು ಕೇಳಿದನು. ಆಗ ಎಲೀಷನು "ನೀನು ಇಸ್ರಾಯೇಲ್ಯರಿಗೆ ಎಷ್ಟು ಕೇಡು ಮಾಡುವೆಯಂಬುದು ನನಗೆ ಪ್ರಕಟವಾಯಿತು. ನೀನು ಅವರ ಕೋಟೆಗಳಿಗೆ ಬೆಂಕಿ ಹೊತ್ತಿಸುವಿ; ಯೌವನಸ್ಥರನ್ನು ಕತ್ತಿಯಿಂದ ಸಂಹರಿಸುವಿ, ಮಕ್ಕಳನ್ನು ಬಂಡೆಗೆ ಅಪ್ಪಳಿಸುವಿ; ಗರ್ಭಿಣಿಯರ ಹೊಟ್ಟೆಯನ್ನು ಸೀಳುವಿ" (ವಚನ 12ಬಿ) ಎಂದು ಉತ್ತರಿಸಿದನು. ಇಂಥ ಕ್ರೂರಕೃತ್ಯ ಗಳು ಪ್ರಾಚೀನ ಕಾಲದ ಯುದ್ಧದಲ್ಲಿ "ಸಾಮಾನ್ಯವಾಗಿತ್ತು" (ನೋಡಿರಿ 2 ಅರಸು 15:16; ಹೋಶೇಯ 13:16).[4] ಹೀಗೆ "ಹಜಾಯೇಲನ ಕತ್ತಿಯು" (1 ಅರಸು 19:17) ಈ ಭಯಂಕರವಾದ ಸೇಡು ತಿರಿಸುವಿಕೆಗಳು ಯೆಹೋವನಿಂದ

ಮುಂತಿಳಿಸಲ್ಪಟ್ಟಿದ್ದವು.

ಹಜಾಯೇಲನು, "ನಿನ್ನ ಸೇವಕನಾದ ನಾನು ನಾಯಿಯಂತಿರುತ್ತೇನಷ್ಟೇ; ನನ್ನಿಂದ ಇಂಥ ಮಹಾಕಾರ್ಯವಾಗುವದು ಹೇಗೆ?" ಎಂದು ಕೇಳಿದನು (2 ಅರಸು 8:13ಎ). ಹಜಾಯೇಲನು ಹೇಳಿದ ಈ ವೇದಭಾಗವನ್ನು ಕೆಲ ಭಾಷಾಂತರಕಾರರು ಈ ರೀತಿಯಾಗಿ ವಿವರಿಸುತ್ತಾರೆ "ನಾನು ನಾಯಿಯಂತಿರುತ್ತೇನಷ್ಟೆ [ನಿಕೃಷ್ಟ ಮನುಷ್ಯ] ಅಂಥ ಭಯಂಕರವಾದ ಸಂಗತಿಗಳನ್ನು ನಾನು ಮಾಡಬಹುದೇ?" (ನೋಡಿರಿ KJV; NCV). ಹೇಗೋ ಹಜಾಯೇಲನು "ಭಯಂಕರವಾದ ಸಂಗತಿಗಳು" ಎಂದು ಹೇಳ ಅಲ್ಲ, ಆದರೆ ಮಹಾಕಾರ್ಯಗಳು ಎಂದು ಹೇಳಿದನು. ಆತನು ಬಳಸಿದ "ನಾಯಿ" ಎಂಬ ಪದದ ಅರ್ಥವು ಕ್ಷುಲಕವಾಗಿರುವದು ಎಂದಲ್ಲ, ಆದರೆ ಸಣ್ಣದಾಗಿರುವ ಎಂಬರ್ಥವನ್ನು ಹೊಂದಿದೆ. REB ಯಲ್ಲಿ "ಆದರೆ ನಾನು ಗತಿಯಿಲ್ಲದ ನಾಯಿಯಾಗಿದ್ದೇನೆ" ಎಂದಿದೆ ಅಸೇರಿನ್ನರ ದಾಖಲೆಯು ಹಜಾಯೇಲನನ್ನು "ಗತಿಯಿಲ್ಲದವನ ಮಗನು" ಎಂದು ಸೂಚಿಸಿದೆ.[5]

ಎಲೀಷನು ಬಹುಶಃ ತನ್ನ ಪ್ರತಿಕ್ರಿಯೆಯನ್ನು ಸೂಚಿಸುವವಂತೆ ತನ್ನ ತಲೆಯನ್ನಲ್ಲಾಡಿಸುತ್ತಾ, "ನೀನು ಅರಾಮ್ಯರ ಅರಸನಾಗುವಿ ಎಂದು ಯೆಹೋವನು ನನಗೆ ತಿಳಿಸಿದ್ದಾನೆ" (8:13ಬಿ) ಎಂದನು.[6] ಆ ಮುಂತಿಳಿಸುವಿಕೆಯನ್ನು ಕೇಳಿದ ಹಜಾಯೇಲನು ಬಹುಶಃ ಸಂತಸವುಳ್ಳವನಾಗಿರಬಹುದು.

ಹಜಾಯೇಲನು, "ಎಲೀಷನನ್ನು ಬಿಟ್ಟು ತನ್ನ ಯಜಮಾನನ ಬಳಿಗೆ ಹೋದಾಗ ಅವನು ಇವನನ್ನು ಎಲೀಷನು ಏನು ಹೇಳಿದನು ಎಂದು ಕೇಳಿದನು" (8:14ಎ). "ನಾನು ಸ್ವಸ್ಥನಾಗುವೆನೋ?" (8:8) ಎಂಬ ಪ್ರಶ್ನೆಗೆ, ಪ್ರವಾದಿಯು ಉತ್ತರಿಸಿದ್ದು "ಹೌದು ಮತ್ತು ಇಲ್ಲ" - ಆದರೆ ಹಜಾಯೇಲನು ಅರಸನಿಗೆ "ಹೌದು" ಎಂಬ ಭಾಗದ ಉತ್ತರವನ್ನು ಕೊಟ್ಟನು: "ನಿನಗೆ ಖಂಡಿತವಾಗಿ ಸ್ವಸ್ಥವಾಗುವದು ಎಂದು ಹೇಳಿದನು" (8:14ಬಿ).

"ಇಲ್ಲ" ಎಂಬ ಎಲೀಷನ ಉತ್ತರದ ಭಾಗವು ಮರು ದಿನ ನೆರವೇರಿಸಲ್ಪಟ್ಟಿತು: "ಮರುದಿನ ಬೆಳಿಗ್ಗೆ ಇವನು [ಹಜಾಯೇಲನು] ಕವುದಿಯನ್ನು ತೆಗೆದುಕೊಂಡು ನೀರಿನಲ್ಲಿ ತೋಯಿಸಿ ಅರಸನ ಮುಖದ ಮೇಲೆ ಹಾಕಿದುದರಿಂದ ಅವನು ಸತ್ತನು" (8:15ಎ) ಉಸಿರುಗಟ್ಟಿ ಆತನು ಸತ್ತನು. "ಕವುದಿ" ಎಂದು (NCV) ಭಾಷಾಂತರವಾದ ಪದವು "ಬಿರುಸಾದ ನೂಲಿನ ಬಟ್ಟೆಯನ್ನು ಸೂಚಿಸುವುದಾಗಿದೆ. ಇದು ಅರಸನ ಮುಖದ ಮೇಲೆ ಹಾಕಿದುದರಿಂದ ಅವನು ಸತ್ತನು" (8:15ಎ) ಉಸಿರುಗಟ್ಟಿ ಆತನು ಸತ್ತನು. "ಕವುದಿ" ಎಂದು ಭಾಷಾಂತರವಾದ ಪದವು ಬಿರುಸಾದ ನೂಲಿನ ಬಟ್ಟೆಯನ್ನು ಸೂಚಿಸುವುದಾಗಿದೆ. ಇದು ಅರಸನ ಹಾಸಿಗೆಯಲ್ಲಿನ ಕೌದಿಯನ್ನೂ ಅಥವಾ ನೆಲದ ಮೇಲೆ ಇರುವ ತಟ್ಟನ್ನೂ ಸಹ ಸೂಚಿಸಬಹುದಾಗಿದೆ. ಬಹುಶಃ ಹಜಾಯೇಲನು ಅರಸನು ಸಹಜವಾದ ಮರಣವನ್ನು ಹೊಂದಿದ್ದಾನೆ ಎಂದು ಕಾಣಿಸುವಂತೆ ಈ ಗುಪ್ತವಧೆಯ ಪದ್ಧತಿಯನ್ನು ಬಳಸಿರಬಹುದು. ಬೆನ್ಹದದನ ಮರಣದಿಂದಾಗಿ, ದಮಸ್ಕದಲ್ಲಿ ಅಧಿಕಾರಕ್ಕಾಗಿ ಕಿತ್ತಾಟವುಂಟಾದುದರಲ್ಲಿ ಸಂಶಯವೇ ಇಲ್ಲ; ಅಂತಿಮವಾಗಿ ಹೇಗೋ, ಎಲೀಷನ ಮಾತುಗಳು ನಿಜವಾದವು: "ಹಜಾಯೇಲನು ಅವನ ಬದಲಾಗಿ ಅರಸನಾದನು" (8:15ಬಿ).

"ಹಜಾಯೇಲನು ... ಅರಾಮ್ಯರ ಬಲಿಷ್ಟನಾದ ದೊರೆಯಾಗಿದ್ದು" (c. 842-796/7 ಕ್ರಿಪೂ).[7] ಆತನು ಎಲೀಷನು ಮುಂತಿಳಿಸಿದ ಸಂಗತಿಗಳನ್ನು ಮಾಡಿದನೇ? ಹೌದು. 8ನೇಯ ಅಧ್ಯಾಯದ ನಂತರದಲ್ಲಿ, ಆತನು ಇಸ್ರಾಯೇಲ್ಯರ ಅರಸನ ವಿರುದ್ಧವಾಗಿ ಯುದ್ಧ ಮಾಡುವುದನ್ನು ನಾವು ನೋಡುತ್ತೇವೆ (8:28; ನೋಡಿರಿ 9:14). 10:32ರಲ್ಲಿ ನಾವು ಹೀಗೆ ಓದುತ್ತೇವೆ: "ಯೆಹೋವನು ಈ ಕಾಲದಲ್ಲಿ ಇಸ್ರಾಯೇಲ್ಯರನ್ನು ಕುಗ್ಗಿಸತೊಡಗಿದನು. ಹಜಾಯೇಲನು ಇಸ್ರಾಯೇಲ್ಯರ ಎಲ್ಲಾ ಕುಲಗಳವರನ್ನೂ ಸೋಲಿಸಿದನು" ಒಂದು ಸಂದರ್ಭದಲ್ಲಂತೂ, ಹಜಾಯೇಲನು ತನ್ನ ಸೈನ್ಯವನ್ನು ಯೂದಾಯದ

ದಕ್ಷಿಣರಾಜ್ಯ ವರೆಗೂ ತಂದನು (12:17, 18).

2 ಅರಸು 13ರಲ್ಲಿ, ನಾವು ಈ ಹೇಳಿಕೆಯ ಸಾರಾಂಶವನ್ನು ಕಾಣುತ್ತೇವೆ: "ದೇವರ ಕೋಪವು ಇಸ್ರಾಯೇಲ್ಯರ ಮೇಲಿತ್ತು, ಮತ್ತು ಆತನು ಅವರನ್ನು ಅರಸನಾದ ಹಜಾಯೇಲನ ಕೈಗೆ ನಿರಂತರವಾಗಿ ಒಪ್ಪಿಸಿದನು ..."; "ಈಗ ಅರಾಮ್ಯರ ಅರಸನಾದ ಹಜಾಯೇಲನಿಂದ ... ಇಸ್ರಾಯೇಲ್ಯರು ಯೆಹೋಷಫಾಟನ ಕಾಲದವರೆಗೂ ಹತ್ತಿಕ್ಕಲ್ಪಟ್ಟರು" (8:3, 22). ದೇವ ಜನರು ದೇವರೊಡನೆ ಒಡಂಬಡಿಕೆಯನ್ನು ಇಟ್ಟುಕೊಳ್ಳಲಿಲ್ಲ ಮತ್ತು ಅದರ ಭಯಂಕರವಾದ ಪರಿಣಾಮಕ್ಕೆ ಕಾರಣರಾದರು.

**ಯೇಹುವಿನ ಕತ್ತಿ**

ದೇವರು ಹಜಾಯೇಲನನ್ನೂ ಮಾತ್ರ ಅಭಿಷೇಕಿಸು ಎಂದಿರಲಿಲ್ಲ, ಆದರೆ ಅದರೊಡನೆ "ನಿಂಶಿಯ ಮಗನಾದ ಯೇಹುವನ್ನು" "ಇಸ್ರಾಯೇಲ್ಯರ ಅರಸನನ್ನಾಗಿ" ಅಭಿಷೇಕಿಸಲು ಹೇಳಿದ್ದನು (1 ಅರಸು 19:16), ಹಜಾಯೇಲನ "ಕತ್ತಿಗೆ" ತಪ್ಪಿಸಿಕೊಂಡವರನ್ನು ಯೇಹುವು ತನ್ನ "ಕತ್ತಿಯಿಂದ" ಕೊಲ್ಲುವನು ಎಂದು ಯೆಹೋವನು ಹೇಳಿದ್ದನು (1 ಅರಸು 19:17). ಹಜಾಯೇಲನು ಹೊರಗಿದ್ದುಕೊಂಡು ಪಾಪಮಯವಾದ ರಾಷ್ಟ್ರವನ್ನು ಶಿಕ್ಷಿಸಿದನು; ಯೇಹುವು ಒಳಗಿದ್ದುಕೊಂಡು ಪಾಪಮಯವಾದ ರಾಷ್ಟ್ರವನ್ನು ಶಿಕ್ಷಿಸಿದನು. ಯೇಹುವನ್ನು ಅಭಿಷೇಕಿಸುವ ಜವಾಬ್ದಾರಿಯು ಎಲೀಷನ ಮೇಲೆ ಬಿದ್ದಿತು - ಈ ಸಮಯವು ಆ ನಿರ್ಧಿಷ್ಟ ಕೆಲಸವನ್ನು ಪರಿಪೂರ್ಣಗೊಳಿಸಲು ಸಮಯವಾಗಿತ್ತು.

2 ಅರಸು 8 ಯುದಾಯದ ದಕ್ಷಿಣದ ರಾಜನಾದ ಯೆಹೋರಾಮನ ಆಳ್ವಿಕೆಯ ಸಂಕ್ಷಿಪ್ತ ವಿವರವನ್ನು ಕೊಡುವುದಾಗಿದೆ (8:16-23). ಯೆಹೋರಾಮನು ಮರಣಿಸಿದ ಮೇಲೆ ಆತನ ಮಗನಾದ ಅಹಜ್ಯನು ಅರಸನಾದನು (8:24-27). ಅಹಜ್ಯನು ಯುದಾಯದ ಅರಸನಾದ ಮೇಲೆ, ಆತನು ದಕ್ಷಿಣ ರಾಜ್ಯದಲ್ಲಿ ಬಾಳನ ಆರಾಧನೆಯನ್ನು ಪರಿಚಯಿಸಿದನು (ನೋಡಿರಿ 8:26, 27; 11:18). ಕೆಲ ದಿವಸಗಳಾದ ನಂತರ, ಆತನೂ ಮತ್ತು ಆತನ ಚಿಕ್ಕಪ್ಪನಾದ ಇಸ್ರಾಯೇಲಿನ ಅರಸನಾದ ಯೋರಾಮನು, ರಾಮೋತ್ ಗಿಲ್ಯಾದಿಗೆ ಹಾಜಾಯೇಲನ ಮೇಲೆ ಯುದ್ಧಕ್ಕೆ ಹೋದರು (8:28; ನೋಡಿರಿ 9:14ಬಿ), ಯೊರ್ದನಿನ ಪಶ್ಚಿಮ ಭಾಗದ ಮೇಲಿರುವ ಕೋಟೆಯು ಇಸ್ರಾಯೇಲ್ಯರ ರಣನೀತಿಯಾಗಿತ್ತು (ಎಲೀಷನ ಸಮಯದಲ್ಲಿನ *ಇಸ್ರಾಯೇಲ್ಯರು ಮತ್ತು ಸುತ್ತಲಿನ ಪ್ರದೇಶಗಳು ಎಂಬ ನಕಾಶೆಯನ್ನು ನೋಡಿರಿ*). ಯುದ್ಧದ ಆರಂಭದ ಸಮಯದಲ್ಲಿ ಯೋರಾಮನು ಗಾಯಗೊಂಡಿದ್ದನು (8:28).

ಅರಸನನ್ನು ಆತನು ಇಜ್ರೇಲಿನಲ್ಲಿರುವ ಚಳಿಗಾಲದ ಅರಮನೆಗೆ ತೆಗೆದುಕೊಂಡು ಸ್ವಸ್ಥವಾಗಲು (ನೋಡಿರಿ 9:1-4) ಹೋದಾಗ (ಎಲೀಷನ ಸಮಯದಲ್ಲಿನ ಇಸ್ರಾಯೇಲ್ಯರು ಮತ್ತು ಸುತ್ತಲಿನ ಪ್ರದೇಶಗಳು ಎಂಬ ನಕಾಶೆಯನ್ನು ನೋಡಿರಿ) ಯೋರಾಮನ ಸೇನೆಯ ರಾಮೋತ್ - ಗಿಲ್ಯಾದಿನಲ್ಲಿ ಇನ್ನೂ ಉಳಿದಿತ್ತು (8:29ಎ). (ಬಹುಶಃ ಆತನು ಇಜ್ರೇಲಿಗೆ ಹೋಗಲು ಕಾರಣ ಆತನ ತಾಯಿ ಇಜಬೇಲಳು ಅಲ್ಲಿದ್ದಳು [ನೋಡಿರಿ 9:30]; ನಾವು ರೋಗ ದಲ್ಲಿರುವಾಗ ನಮ್ಮಲ್ಲಿ ಹೆಚ್ಚಿನವರು ತಾಯಿಯ ಆರೈಕೆಯನ್ನು ಬಯಸುವವರಾಗಿರುತ್ತೇವೆ.) ಸ್ವಲ್ಪ ಹೊತ್ತಿನ ನಂತರದಲ್ಲಿ, ಅಹಜ್ಯನು ಇಜ್ರೇಲಿಗೆ ಯೋರಾಮನನ್ನು ನೋಡುವುದಕ್ಕೋಸ್ಕರ ಬಂದನು (8:29ಬಿ). ಆ ಹಂತವನ್ನು ಯೋರಾಮ ಮತ್ತು ಅಹಜ್ಯ ಇಬ್ಬರಿಗೂ ಶಿಕ್ಷೆಯಾಗಿ ಕೊಡಲ್ಪಟ್ಟಿತ್ತು (ನೋಡಿರಿ 2 ಪೂರ್ವಕಾಲವೃತ್ತಾಂತ 22:6, 7).

ಅಧ್ಯಾಯ 9 ಯೇಹುವಿನ ಅಭಿಷೇಕದಿಂದ ಪ್ರಾರಂಭವಾಗುತ್ತದೆ. ನಾವು ವೇದಭಾಗವನ್ನು ನೋಡುವ ಮೊದಲು, ಕೆಲ ಹಿನ್ನಲೆಗಳು ಕ್ರಮವಾಗಿವೆ. 9:25ರಿಂದ ಎಲೀಯನು ಅಹಾಬನಿಗೂ ಆತನ ಮನೆಯವರಿಗೂ ಶಾಪಕೊಡುವಾಗ ಯೇಹು ನಾಬೋತನ ದ್ರಾಕ್ಷೇಯ ತೋಟದಲ್ಲಿ ಅಹಾಬನೊಡನೆ ಉಪಸ್ಥಿತನಿದ್ದುದನ್ನು ನಾವು ಕಲಿಯುತ್ತೇವೆ.

ಆ ಸಂದರ್ಭದಲ್ಲಿ ಯೆಹೋವನು ಎಲೀಯನಿಗೆ,

> ಅವನಿಗೆ - ನೀನು ಹೋಗಿ ಸಮಾರ್ಯದಲ್ಲಿ ವಾಸಿಸುವ ಇಸ್ರಾಯೇಲ್ ರಾಜನನ್ನು ಕಾಣು; ಅವನು ಈಗ ನಾಬೋತನ ದ್ರಾಕ್ಷೇತೋಟವನ್ನು ಸ್ವಾಧೀನ ಮಾಡಿಕೊಳ್ಳುವದ ಕ್ಕೋಸ್ಕರ ಅಲ್ಲಿಗೆ ಹೋಗಿದ್ದಾನೆ. ಅವನಿಗೆ - "ನೀನು ಕೊಲೆಮಾಡಿ (ಅಕ್ಷರ ಸಹ ಹತ್ಯೆ ಮಾಡಿ) ಸ್ವಾಸ್ಥ್ಯವನ್ನು ಸಂಪಾದಿಸಿಕೊಂಡಿಯಲ್ಲವೋ?" ನಾಯಿಗಳು ನೋಬೋತನ ರಕ್ತವನ್ನು ನೆಕ್ಕಿದ ಸ್ಥಳದಲ್ಲೇ ನಿನ್ನ ರಕ್ತವನ್ನೂ ನೆಕ್ಕುವವು. ಎಂಬುದಾಗಿ ಯೆಹೋವನು ಅನ್ನುತ್ತಾನೆ ಎಂದು ಅವನಿಗೆ ಹೇಳು ಎಂಬುದೇ (1 ಅರಸು 21:18, 19).

ಎಲೀಯನು ದ್ರಾಕ್ಷೇತೋಟವನ್ನು ತಲುಪಿದಾಗ ಅಹಾಬನು ತನ್ನ ಹೊಸ ಆಸ್ತಿಯನ್ನು ಪರೀಕ್ಷಿಸುತ್ತಿದ್ದಾನೆ, ಆತನಿಗೆ ಯೇಹು ಮತ್ತು ಇನ್ನೊಬ್ಬ ಸರದಾರನು ಜೊತೆ ನೀಡಿದ್ದಾರೆ (2 ಅರಸು 9:25). ಅರಸನು ಎಲೀಯನನ್ನು ನೋಡಿದಾಗ, ಆತನು "ನನ್ನ ವೈರಿಯೇ, ನನ್ನನ್ನು ಕಂಡುಕೊಂಡಿಯಾ" (1 ಅರಸು 21:20ಎ) ಎಂದು ಕೇಳಿದನು. ಆಗ ಎಲೀಯನು ಅವನಿಗೆ ಹೀಗೆ ಹೇಳಿದನು,

> ಅವನು - ಹೌದು ಕಂಡುಕೊಂಡೆನು; ನೀನು ನಿನ್ನನ್ನು ಪಾಪಕ್ಕೆ ಮಾರಿಮಾರಿಬಿಟ್ಟು; ಯೆಹೋವನ ದೃಷ್ಟಿಯಲ್ಲಿ ದ್ರೋಹಿಯಾದಿಯಲ್ಲಾ ಯೆಹೋವನು ನಿನ್ನನ್ನು ಕುರಿತು - ನಾನು ನಿನ್ನ ಮೇಲೆ ಕೇಡನ್ನು ಬರಮಾಡಿ ನಿನ್ನನ್ನು ಕಸವನ್ನೋ ಎಂಬಂತೆ ತೆಗೆದುಹಾಕುವೆನು; ನಿನ್ನ ಸಂತಾನದ ಗಂಡಸರಲ್ಲಿ ಸ್ವತಂತ್ರರಾಗಲಿ ಪರತಂತ್ರರಾಗಲಿ ಎಲ್ಲರನ್ನೂ ಇಸ್ರಾಯೇಲ್ಯರೊಳಗಿಂದ ಕಡಿದುಬಿಡುವೆನು. ನೀನು ಇಸ್ರಾಯೇಲ್ಯರನ್ನು ಪಾಪಕ್ಕೆ ಪ್ರೇರಿಸಿ ನನಗೆ ಕೋಪವನ್ನೆಬ್ಬಿಸಿದ್ದರಿಂದ ನೆಬಾಟನ ಮಗನಾದ ಯಾರೊಬ್ಬಾಮನ ಮನೆಗೂ ಅಹೀಯನ ಮಗನಾದ ಬಾಷನ ಮನೆಗೂ ಆದ ಗತಿ ನಿನ್ನ ಮನೆಗೂ ಆಗುವದು ಅನ್ನುತ್ತಾನೆ ಇದಲ್ಲದೆ ಆತನು ಈಜೆಬೆಲಳನ್ನು ಕುರಿತ ನಾಯಿಗಳು ಇಜ್ರೇಲ್ ಪಟ್ಟಣದ ಗೋಡೆಯ ಬಳಿಯಲ್ಲಿ ಆಕೆಯ ಶವವನ್ನು ತಿನ್ನುವವು (1 ಅರಸು 21:20ಬಿ-23).

ಅಹಾಬನ ಪ್ರತಿಕ್ರಿಯೆಗೆ ಈ ಭಯಂಕರವಾದ ಪ್ರವಾದನೆಯು ತಡವಾದರೂ ಪರಿಪೂರ್ಣ ವಾಯಿತು (1 ಅರಸು 21:27-29) ಆದರೆ ಆತನು ಅದನ್ನು ನಿರಾಕರಿಸಲಿಲ್ಲ.

ಅಹಾಬನ ಮರಣದ ನಂತರ, ಅಹಾಬನ ಮಗನಾದ ಯೋರಾಮನಿಗೆ ಯೇಹುವು ಸೇವಕನಾಗಿ ಅಧಿಕಾರದ ಸ್ಥಾನವನ್ನು ಪಡೆದನು. ಆತನು ಬಹುಶಃ ಇಸ್ರಾಯೇಲ್ ಸೇನೆಯ ನಾಯಕನಾಗಿರಬಹುದು (ನೋಡಿರಿ 2 ಅರಸು 9:5; NIV). 2 ಅರಸು 9 ತೆರೆಯುತ್ತಿದ್ದಂತೆಯೇ ಆತನು ರಾಮೋತ - ಗಿಲ್ಯಾದಿನಲ್ಲಿ ತನ್ನ ಸೇನೆಯೊಡನೆ ಇದ್ದು (9:1, 2) ಹಜಾಯೇಲನೊಡನೆ ಹೋರಾಡುತ್ತಿದ್ದಾನೆ (9:14).

ಇದು ಯೇಹುವನ್ನು ಅಭಿಷೇಕಿಸುವ ಸಮಯವಾಗಿತು, ಆದರೆ ಎಲೀಷನು ತಾನೇ ಸ್ವತಃ ರಾಮೋತ್ ಗಿಲ್ಯಾದಿಗೆ ಹೋಗಿ ಆ ಕಾರ್ಯವನ್ನು ಮಾಡಲು ಆಗಲಿಲ್ಲ. ಆತನು ಬಲು ವೃದ್ಧನಾಗಿದ್ದರಿಂದ ಪ್ರಯಾಣ ಮಾಡುವದ ಉಚಿತವಲ್ಲ ಎಂದು ಸೂಚಿಸಲ್ಪಟ್ಟಿರಬಹುದು, ಬಹುಶಃ ಆತನ ವಯಸ್ಸು ಇನ್ನೂ ನಾಲ್ವತ್ತರಲ್ಲಿದ್ದನು. ಆದರೆ ಆತನು ಗುರುತಿಸಲ್ಪಡುತ್ತಿದ್ದು ಮತ್ತು ಅಲ್ಲಿ ಗೌಪ್ಯದ ಅವಶ್ಯಕತೆಯು ಇದೆ ಎಂದು ಆತನು ತಿಳಿದಿದ್ದನು. ಆದ್ದರಿಂದ ಆತನು "ಪ್ರವಾದಿಮಂಡಲಿಯವರಲ್ಲಿ ಒಬ್ಬನನ್ನು" ಕಳುಹಿಸಿದನು (9:1-3). ಬಹುಶಃ ಈತನು ಗೇಹಜಿಯ ಬದಲಾಗಿ ನೇಮಿಸಿದ ಸೇವಕನಿರಬಹುದು.[8]

ಆ ಯೌವನಸ್ಥನು ಯೇಹುವನ್ನು ಕಂಡು ಆತನನ್ನು ಸೇನೆಯ ನಾಯಕರಿಂದ ದೂರ ಕರೆದುಕೊಂಡು ಹೋಗಿ, ಆತನ ತಲೆಯ ಮೇಲೆ ಎಣ್ಣೆಯನ್ನು ಸುರಿದನು (9:4-6ಎ).

ಇಸ್ರಾಯೇಲಿನ ಅರಸನು (ಉತ್ತರದ ರಾಜ್ಯದ) ಯೆಹೋವನ ಪ್ರತಿನಿಧಿಯೊಬ್ಬನಿಂದ ಅಭಿಷೇಕಿಸಲ್ಪಡುತ್ತಾ ಇರುವದು ದೇವವಾಕ್ಯದಲ್ಲಿ ಇದೊಂದೇ ದಾಖಲೆಯಾಗಿದೆ. ಪ್ರವಾದಿಯ ಸೇವಕನು ಯೇಹುವಿಗೆ ಭಯಂಕರವಾದ ನಿಯೋಗವನ್ನು ಕೊಟ್ಟನು:

> ಇಸ್ರಾಯೇಲ್ ದೇವರಾದ ಯೆಹೋವನ ಮಾತನ್ನು ಕೇಳು, ಆತನು ನಿನಗೆ ನಾನು ನನ್ನ ಪ್ರಜೆಯಾದ ಇಸ್ರಾಯೇಲ್ಯರ ಅರಸನಾಗುವುದಕ್ಕೆ ಅಭಿಷೇಕಿಸಿದ್ದೇನೆ. ನೀನು ನಿನ್ನ ಯಜಮಾನನಾದ ಅಹಾಬನ ಮನೆಯವರನ್ನು ಸಂಹರಿಸಿಬಿಡು; ಆಗ ನನ್ನ ಸೇವಕರಾದ ಪ್ರವಾದಿಗಳೇ ಮೊದಲಾದ ಯೆಹೋವಭಕ್ತರ ರಕ್ತವನ್ನು ಸುರಿಸಿದ್ದಕ್ಕಾಗಿ ನಾನು ಈಜೆಬೆಲಳಿಗೆ ಮುಯ್ಯಿ ತೀರಿಸಿದಂತಾಗುವದು. ಅಹಾಬನ ಕುಟುಂಬದವರೆಲ್ಲಾ ನಿರ್ನಾಮವಾಗಬೇಕು. ಅವನ ಸಂತಾನದ ಗಂಡಸರಲ್ಲಿ ಸ್ವತಂತ್ರರಾಗಿರಲಿ ಪರತಂತ್ರರಾಗಿರಲಿ ಎಲ್ಲರನ್ನೂ ಇಸ್ರಾಯೇಲ್ಯರೊಳಗಿಂದ ತೆಗೆದು ಹಾಕುವೆನು. ನೆಬಾಟನ ಮಗನಾದ ಯಾರೊಬ್ಬಾಮನ ಮನೆಗೂ ಅಹೀಯನ ಮಗನಾದ ಬಾಷನ ಮನೆಗೂ ಆದ ಗತಿಯು ಅಹಾಬನ ಮನೆಗೂ ಆಗುವದು ಈಜೆಬೆಲಳ ಶವವು ಸಮಾಧಿಯನ್ನು ಸೇರುವುದಿಲ್ಲ, ನಾಯಿಗಳು ಅದನ್ನು ಇಜ್ರೇಲಿನ ಹೊಲದಲ್ಲಿ ತಿಂದುಬಿಡುವವು (9:6ಬಿ-10ಎ).

ಯೇಹು ತನ್ನ ಜೊತೆ ಸೇನೆಯವರೊಡನೆ ಮರಳಿದಾಗ ಮಾನವ ನಿಯೋಗದ ಇರುವಿಕೆಗಾಗಿ ಅವರು ಆಶ್ಚರ್ಯಪಟ್ಟರು. ಮೊದಲು ಯೇಹು ಅವರ ಪ್ರಶ್ನೆಗಳಿಂದ ತಪ್ಪಿಸಿಕೊಳ್ಳಲು ಯತ್ನಿಸಿದನು, ಆದರೆ ಅಂತಿಮವಾಗಿ "ಆತನು ನನಗೆ, ನಿನ್ನನ್ನು ಇಸ್ರಾಯೇಲ್ಯರ ಮೇಲೆ ಅರಸನಾಗುವುದಕ್ಕೆ ಅಭಿಷೇಕಿಸಿದ್ದೇನೆಂಬುದಾಗಿ ಯೆಹೋವನು ಹೇಳುತ್ತಾನೆ ಎಂದು ಹೇಳಿದನು" (9:12ಬಿ) ಎಂದು ಉತ್ತರಿಸಿದನು. ಇತರ ನಾಯಕರು ಉತ್ಸಾಹದಿಂದ ಆ ಸೇನಾನಾಯಕನನ್ನು ತಮ್ಮ ಹೊಸ ಅರಸನನ್ನಾಗಿ ಒಪ್ಪಿಕೊಂಡರು, ಕೊಂಬುಗಳು ಊದಲ್ಪಟ್ಟವು, ಮತ್ತು ಅವರು "ಯೇಹು ಅರಸನಾಗಿದ್ದಾನೆ!" ಎಂದು ಆರ್ಭಟಿಸಿದರು (9:13ಬಿ). ಯೋರಾಮನು ಯಾರೊಬ್ಬರೂ ಪಟ್ಟಣವನ್ನು ಬಿಟ್ಟು ಹೋಗದೇ ಇರುವುದನ್ನು ಖಚಿತಪಡಿಸಿಕೊಳ್ಳುವಂತೆ ಅವರು ಸೂಚನೆಯನ್ನು ಕೊಟ್ಟನು (9:15ಬಿ). ನಂತರ, ಆತನು ತನ್ನ ರಥವನ್ನೇರಿ ಕುದುರೆಯು (ನೋಡಿರಿ 9:20ಬಿ) ಇಜ್ರೇಲಿಗೆ ಸಮೀಪಿಸುತ್ತಿರುವಂತೆ, ಒಬ್ಬ ರಾಹುತನು ಅವರನ್ನು ಭೇಟಿಯಾಗಲು ನಲವತ್ತೈದು - ಐವತ್ತು ಮೈಲಿ ದೂರ ಕಳುಹಿಸಲ್ಪಟ್ಟನು (9:16).

ಬಹುಶಃ ಯುದ್ಧವು ಹೇಗೆ ನಡೆಯುತ್ತಿದೆ ಎಂದು ಕೇಳಲು ಇರಬಹುದು (9:17). ಯೇಹುವು ಆ ಸಂದೇಶಕ್ಕೆ ಜೊತೆಗೆ ಸೇರಿಕೊಂಡನು ಮತ್ತು ಮುಂದೆಸಾಗಿದನು (9:18). ಎರಡನೆಯ ರಾಹುತನು ಕೂಡ ಅದೇ ಪರಿಣಾಮದೊಂದಿಗೆ ಕಳಿಸಲ್ಪಟ್ಟನು (9:19, 20). ಅಂತಿಮವಾಗಿ, ಅರಸನಾದ ಯೋರಾಮ ಮತ್ತು ಅರಸನಾದ ಅಹಜ್ಯನು ತಮ್ಮ ರಥಗಳಲ್ಲಿ ಕೂತುಕೊಂಡು ಯೇಹುವನ್ನು ನೋಡಲಿಕ್ಕೆ ಹೊರಟರು (9:21ಎ). ವಚನ 21ರ ಕೊನೆಯಲ್ಲಿನ: "ಆತನನ್ನು ಎದುರುಗೊಳ್ಳುವುದಕ್ಕೆ ಹೊರಟು *ಇಜ್ರೇಲಿನವನಾದ ನಾಬೋತನ ಹೊಲದಲ್ಲಿ ಅವನನ್ನು ಸಂಧಿಸಿದರು* ಎಂಬ ಅಶುಭಕರ ಸಂಗತಿಯೆಡೆಗೆ ಗಮನಹರಿಸದೇ ಇರಬೇಡಿರಿ" (ಒತ್ತಿ ಹೇಳಿದ್ದು ನನ್ನದು).

ಯೇಹುವು ಯೋರಾಮನನ್ನು ಬಾಣದಿಂದ ಹೊಡೆದನು (9:24) ಮತ್ತು ತನ್ನ ಜೊತೆ ಸೇನಾಪತಿಯಾದ ಬಿದ್ಕರನಿಗೆ ಹೇಳಿದನು,

> ... ಯೋರಾಮನ ಶವವನ್ನು ಎತ್ತಿ ಇಜ್ರೇಲಿನವನಾದ ನಾಬೋತನ ಹೊಲದಲ್ಲಿ ಹಾಕು. ಒಂದು ದಿವಸ ನಾವಿಬ್ಬರೂ ಕುದುರೆ ಹತ್ತಿ ಇವನ ತಂದೆಯಾದ ಅಹಾಬನ ಹಿಂದಿನಿಂದ ಹೋಗುತ್ತಿರುವಾಗ, ಯೆಹೋವನು ಅಹಾಬನಿಗೆ - "ನನ್ನ ಮಾತನ್ನು ಕೇಳು, ನೀನು

ನಿನ್ನೆ ಸುರಿಸಿದ ನಾಬೋತನ ಮತ್ತು ಅವನ ಮಕ್ಕಳ ರಕ್ತವನ್ನು ನಿಶ್ಚಯವಾಗಿ ನೋಡಿದ್ದೇನೆ. ನೀನು ಅವರ ರಕ್ತವನ್ನು ಸುರಿಸಿದ ಹೊಲದಲ್ಲೇ ನಿನಗೆ ಮುಯ್ಯಿ ತೀರಿಸುವೆನು" ಎಂದು ಪ್ರವಾದಿಯಿಂದ ಹೇಳಿಸಿದ್ದು ನಿನಗೆ ನೆನಪಿರುತ್ತದಲ್ಲಾ; ಯೆಹೋವನ ಆ ಮಾತು ನೆರವೇರುವಂತೆ ಇವನ ಶವವನ್ನು ಆ ಹೊಲದಲ್ಲಿ ಹಾಕಿಬಿಡು ಎಂದು ಹೇಳಿದನು (9:25, 26).

ಅರಸನಾದ ಅಹಜ್ಯನು ಓಡಿಹೋದನು ಆದರೆ ಗಾಯಗೊಂಡಿದ್ದ ಆತನು ಸ್ವಲ್ಪ ಸಮಯದ ನಂತರ ಮರಣಿಸಿದನು (9:27, 28).

ಯೇಹುವು ಇಜ್ರೇಲನ್ನು ಮುಟ್ಟುವಷ್ಟರಲ್ಲಿ ಕುಖ್ಯಾತಳಾದ ಈಜೆಬೆಲಳಿಗೆ ಸೇನಾಪತಿಯು ತನ್ನ ಮಗನನ್ನು ಕೊಂದನು ಎಂಬ ವಿಷಯವು ತಲುಪಿತು (ನೋಡಿರಿ 9:30, 31) "ತಲೆಯನ್ನು ಆಭರಣಗಳಿಂದ ಅಲಂಕರಿಸಿಕೊಂಡು ಕಣ್ಣಿಗೆ ಕಾಡಿಗೆ ಹಚ್ಚಿಕೊಂಡಳು" (9:30ಬಿ). ಅವಳೇನಾದರೂ ಯೇಹುವನ್ನು ತಪ್ಪು ದಾರಿಗೆಳೆಯಲು ಪ್ರಯತ್ನಿಸುತ್ತಿರಬಹುದೇ? ಬಹುಶಃ ಅವಳು ಯೌವನಸ್ಥಳಲ್ಲದಿದ್ದರೂ ಕೂಡಾ ಅವಳು ಇನ್ನೂ ಆಕರ್ಷಕವಾಗಿರಬಹುದು. ಇನ್ನೊಂದು ಹೆಚ್ಚಿನ ಸಾಧ್ಯತೆ ಎಂದರೆ ತಾನು "ರಾಣಿಯಾಗಿಯೇ ಮರಣಿಸಬೇಕು" ಎಂದು ಮನದಟ್ಟು ಮಾಡಿಕೊಂಡಿದ್ದಳು.

ಯೇಹುವು ಪಟ್ಟಣದ ಬಾಗಿಲ ಬಳಿ ಪ್ರವೇಶಿಸಿದಾಗ, ಆಕೆಯು ಅರಮನೆಯ ಕಿಟಕಿಯಲ್ಲಿ ನೋಡುತ್ತಾ ನಿಂತುಕೊಂಡಿದ್ದಳು ಮತ್ತು ಆತನಿಗೆ "ನಿನ್ನ ಯಜಮಾನನನ್ನು ಕೊಂದ ಜಿಮ್ರಿಗೆ ಸಮಾನನೇ ಕ್ಷೇಮವೋ?"[9] ಎಂದು ಕೇಳಿದಳು (9:30ಸಿ, 31). ಅವಳು ಯೇಹುವನ್ನು ಜಿಮ್ರಿ ಎಂದು ಕರೆದಳು, ಯಾಕೆಂದರೆ ಆತನು ಅರಸನನ್ನು ಕೊಂದ ಹಾಗೆ ಜಿಮ್ರಿಯು ನಾಲ್ವತ್ತೈದು ವರ್ಷಗಳ ಹಿಂದೆಯೇ ಆ ಕೆಲಸವನ್ನು ಮಾಡಿದ್ದನು (ನೋಡಿರಿ 1 ಅರಸು 16:8-10). ಜಿಮ್ರಿಯು ತನ್ನ ಜೀವವನ್ನು ಕಳೆದುಕೊಳ್ಳುವ ಮೊದಲು ಕೇವಲ ಏಳು ದಿನಗಳವರೆಗೆ ಆಧಿಪತ್ಯವನ್ನು ಮಾಡಿದನು ಎಂಬ ದುರುಳವಾದ ಸೂಚನೆಯು ಬಹುಶಃ ಅವಳ ಮಾತಿನಲ್ಲಿ ಇರಬಹುದು (9:15).

ಆ ಸಮಯದಲ್ಲಿ ಕೆಲ ಮುಖಗಳು ಅರಮನೆಯ ಕಿಟಕಿಯಿಂದ ಹೊರಕಾಣಿಸಿದವು. ಯೇಹುವು "ಯಾರು ಅಲ್ಲಿ ನನ್ನ ಪಕ್ಷದವರು ಯಾರು?" ಎಂದು ಕೂಗಿದನು (9:32ಎ). ಇಬ್ಬರು ಮೂವರು ಭಯಗ್ರಸ್ತರಾದ ಕಂಚುಕಿಗಳು ತಲೆಹಾಕಿದರು (9:32ಬಿ). ಯೇಹುವು ಅವರಿಗೆ "ಆಕೆಯನ್ನು ಕೆಳಗೆ ದೊಬ್ಬಿರಿ" ಎಂದು ಆಜ್ಞೆಮಾಡಿದನು (9:33ಎ). "ಆಗ ಅವರು ದೊಬ್ಬಿದರು ಆಗ ಆಕೆಯ ರಕ್ತವು ಗೋಡೆಗೂ ಕುದುರೆಗಳಿಗೂ ಸಿಡಿಯಿತು. ಅವನು ಆಕೆಯ ಶವವನ್ನು ತುಳಿಸಿಬಿಟ್ಟನು" (ಅವನ ರಥಗಳು ಮತ್ತು ಕುದುರೆಗಳಿಂದ) (9:33ಬಿ).

ಯಾರೊಬ್ಬರು ಆತನನ್ನು ವಿರೋಧಿಸಲಿಲ್ಲ, ಯೇಹುವು ಅರಮನೆಗೆ ಹೋಗಿ ತನ್ನ ಸ್ಥಾನ ಗ್ರಹಣ ಮಾಡಿದನು ಮತ್ತು ಅರಸನಾಗಿ ತನ್ನ ಮೊದಲ ಊಟವನ್ನು ಮಾಡಿದನು (9:34ಎ). ಆ ಊಟವು ಆತನಿಗೆ ಬಹುಶಃ ಹೇಗೋ ರಸವತ್ತಾಗಿತ್ತು, ಯಾಕೆಂದರೆ ಆತನು ಅವರ ದುಷ್ಟತ್ವದ ಮಾರ್ಗದಿಂದ ಕಾರಣವನ್ನು ಹೊಂದಿದ್ದರೂ ಕೂಡಾ ಈಜೆಬೆಲಳಿಗೆ ಯೋಗ್ಯವಾದ ಸಮಾಧಿಯನ್ನು ಮಾಡಬೇಕೆಂದು ಆತನು ನಿರ್ಧರಿಸಿದ್ದನು.[10] ಆತನು ತನ್ನ ಸೇವಕರಿಗೆ, "ಆ ಶಾಪಗ್ರಸ್ಥ ಸ್ತ್ರೀಯ ಶವವನ್ನು ನೋಡಿಕೊಂಡು ಸಮಾಧಿಮಾಡಿರಿ, ಆಕೆಯು ರಾಜಪುತ್ರಿಯಾಗಿರುತ್ತಾಳಷ್ಟೇ" (9:34ಬಿ). ಈಜೆಬೆಲಳು ಚೀದೋನ್ಯರ ಅರಸನ ಪುತ್ರಿಯಾಗಿದ್ದಳು (1 ಅರಸು 16:31), ಎಂದಿದೆಯೇ ಹೊರತು, ಅರಸನ ಹೆಂಡತಿ ಮತ್ತು ತಾಯಿಯೆಂದೂ ಮತ್ತು ಅಜ್ಜಿಯೆಂದೂ ಸೂಚಿತವಾಗಿಲ್ಲ.

ಹೇಗೋ, ಅವರು ಈಜೆಬೆಲಳನ್ನು ಸಮಾಧಿ ಮಾಡಲು ಹೋದಾಗ "ಅವರಿಗೆ ಆಕೆಯ ತಲೆಬುರುಡೆ, ಕೈ ಕಾಲುಗಳ ಹೊರತಾಗಿ ಬೇರೇನೂ ಸಿಕ್ಕಲಿಲ್ಲ" (2 ಅರಸು 9:35); ನಾಯಿಗಳು ಅವಳ ದೇಹವನ್ನು ತಿಂದು ಬಿಟ್ಟಿದ್ದವು. ಆ ದಿನದಲ್ಲಿ ಕ್ರೌರ್ಯವು ಬೀದಿಯ

ಪಾಲಾಗಿದ್ದು "ಮರಣಿಸಿದ ರಾಣಿಯನ್ನು ಜಿಂಕೆಯನ್ನು ತಿನ್ನುವಂತೆ ತಿಂದವು" ಸೇವಕರು ಸಂಭವಿಸಿದ್ದನ್ನು ತಿಳಿಸಿದಾಗ, ದುರಂತವನ್ನು ನೋಡಿದ ಯೇಹುವು ಎಲೀಯನ ಪ್ರವಾದನೆಯು ಸಂಪೂರ್ಣವಾಯಿತು ಎಂದುಕೊಂಡನು:

> ... "ನಾಯಿಗಳು ಈಜೆಬೆಲಳ ದೇಹಮಾಂಸವನ್ನು ಇಜ್ರೇಲಿನ ಹೊಲದಲ್ಲಿ ತಿಂದುಬಿಡುವವು; ಆಕೆಯ ಶವವು ಆ ಹೊಲಕ್ಕೆ ಗೊಬ್ಬರವಾಗುವದು; ಇದು ಈಜೆಬೆಲಳ ಶವವೆಂದು ಯಾರಿಗೂ ಗುರುತುಸಿಕ್ಕದ ಹಾಗಾಗುವದು ಎಂಬುದಾಗಿ ಯೆಹೋವನು ತಿಷ್ಬೀಯನೂ ತನ್ನ ಸೇವಕನೂ ಆದ ಎಲೀಯನ ಮುಖಾಂತರವಾಗಿ ಹೇಳಿಸಿದ ಮಾತು ಈಗ ನೆರವೇರಿತು" (9:36, 37) ಅಂದನು.

ಈಜೆಬೆಲಳು "ಸೌಂದರ್ಯವು ಕೊನೆಯಲ್ಲ" (ಜ್ಞಾನೋಕ್ತಿ 31:30; LB) ಎಂಬ ಕಠಿಣ ಮಾರ್ಗವನ್ನು ಕಲಿತಿಳಿದ್ದಳು. ಅವಳ ದೇಹವು ಸೋಕಿಸುವವರು ಅವಳ ಸೌಂದರ್ಯವನ್ನು ಮೆಚ್ಚುವಂತೆ ನೇರವಾಗಿರಲಿಲ್ಲ; ಅವಳ ದೇಹವು ನೇರವಾಗಿ ಮಲಗಲೇ ಇಲ್ಲ.

ಹೀಗೆ ಯೇಹುವಿನ ಆಳ್ವಿಕೆಯ ಆರಂಭವಾಗಿ ಆತನು ಇಪ್ಪತ್ತೆಂಟು ವರುಷ ರಾಜ್ಯವಾಳಿದನು (10:36). ಅಧ್ಯಾಯ 10 ಅಹಾಬನ ಸಂತತಿಯವರನ್ನು ಮತ್ತು ಬಾಳನ ಆರಾಧಕರನ್ನು ಅಳಸಿ ಹಾಕುವ ಕಾರ್ಯವನ್ನು ಹೇಗೆ ಕೈಗೆತ್ತಿಕೊಂಡನು ಎಂಬುದನ್ನು ಹೇಳುತ್ತದೆ. ಈ ರೀತಿಯ ಕ್ರಾಂತಿಕಾರಕ ಚಿಕಿತ್ಸೆಯ ಬಗೆಗೆ ಯೋಚಿಸಿರಿ, ಈ ರೋಗದ ಪ್ರತಿಯೊಂದು ಕಸವನ್ನು ತೆಗೆದು ಹಾಕಿದಾಗ ಆ ದೇಹವು ಬದುಕುವ ನೀರಿಕ್ಷೆಯು ಇದೆ.

## ಸತ್ಯದದ ನಾಲ್ಕು ಹೇಳಿಕೆಗಳು

ಹಜಾಯೇಲ ಮತ್ತು ಯೇಹುವಿನ ಕಥೆಗಳು ಭೀಕರವಾದ ರಕ್ತಸೋಕಿತವಾದವುಗಳು. ಇದರಿಂದ ಯಾವ ಸಾಧ್ಯತೆಗಳನ್ನು ನೀವು ಆಯ್ದುಕೊಳ್ಳುತ್ತೀರಿ? ನಾವು ಹೃದಯದಲ್ಲಿ ಇಟ್ಟುಕೊಳ್ಳಬಹುದಾದ ನಾಲ್ಕು ಸತ್ಯಗಳನ್ನು ನಾನು ಸೂಚಿಸುವವನಾಗಿದ್ದೇನೆ.

**1. ದೇವರು ಇನ್ನೂ ಎಲ್ಲವುಗಳ ಮೇಲೆ ತನ್ನ ನಿಯಂತ್ರವನ್ನು ಸಾಧಿಸಿದ್ದಾನೆ.**

ನೀವು ಒಂದು ವೇಳೆ ಹಜಾಯೇಲ ಮತ್ತು ಯೇಹುವಿನ ಗಂಡಾಂತರಕಾರಿಯಾದ ದಿನಗಳಲ್ಲಿ ಜೀಸುವವರಾಗಿದ್ದರೆ "ದೇವರು ಇದನ್ನೆಲ್ಲಾ ಸಂಭವಿಸುವುದಕ್ಕೆ ಯಾಕೆ ಬಿಟ್ಟನು? ಎಂದು ಆಶ್ಚರ್ಯಪಡುತ್ತಿದ್ದಿರಲ್ಲವೇ? ಪರಿಸ್ಥಿತಿಯ ಮೇಲೆ ನಿಯಂತ್ರಣವನ್ನು ಕಳೆದುಕೊಳ್ಳುವ ಬದಲು, ದೇವರು ಸಂಪೂರ್ಣವಾಗಿ ಇನ್ನೂ ಎಲ್ಲವುಗಳ ಮೇಲೆ ತನ್ನ ನಿಯಂತ್ರಣದಲ್ಲಿ ಇದ್ದನು ಎಂಬುದನ್ನು 2 ಅರಸು 8-10 ಅದನ್ನು ತಿಳಿಸುತ್ತದೆ. ಹಜಾಯೇಲ ಮತ್ತು ಯೇಹುರವರು ಅಧರ್ಮಿಗಳಾಗಿದ್ದಾಗಲೂ ದೇವರು ಅವರನ್ನು ನ್ಯಾಯದ ಸಾಧನಗಳಾಗಿ ಉಪಯೋಗಿಸಿದನು.

ನಾವು ಅತ್ಯಂತ ಕಠಿಣವಾದ ಪರಿಸ್ಥಿತಿಯಿಂದ ಸುತ್ತುವರೆಯಲ್ಪಟ್ಟಾಗ, ಗಲಿಬಿಲಿಗೊಳ್ಳುವುದಕ್ಕೆ ಕಾರಣ ಮತ್ತು ಉದ್ದೇಶಗಳನ್ನು ನೋಡುವದು ಕಠಿಣವಾದದ್ದು ಆಗಿದೆ. ಅಂಥ ಸಮಯದಲ್ಲಿ, "ದೇವರು ರಾಷ್ಟ್ರಗಳ ಮೇಲೆ ಆಳುವವನಾಗಿದ್ದಾನೆ" (ಕೀರ್ತನೆ 47:8ಎ; ನೋಡಿರಿ 22:28) ಎಂಬುದನ್ನು ನೆನಪುಮಾಡಿಕೊಳ್ಳುವದು ಉಚಿತವಾಗಿದೆ. ಆತನು ರಾಷ್ಟ್ರಗಳನ್ನು ದೊಡ್ಡದ್ದಾಗಿ ಮಾಡುವುದಕ್ಕೂ ಮತ್ತು ನಾಶಮಾಡುವುದಕ್ಕೂ ಶಕ್ತನಾಗಿದ್ದಾನೆ (ಯೋಬ 12:23). ಆತನು ದೇಶದ ನಾಯಕರ ಮಾತುಗಳನ್ನು ವಿಫಲಗೊಳಿಸುವುದಕ್ಕೂ ಅವರ ಯೋಜನೆಗಳನ್ನೂ ಹುಸಿಗೊಳಿಸುವುದಕ್ಕೂ ಶಕ್ತನಾಗಿದ್ದಾನೆ (ಕೀರ್ತನೆ 33:10). ಇದೆಲ್ಲದರ ಮೇಲೆ, ಎಂಥ ಕಷ್ಟಕರವಾದ ಜೀವಿತವು ಬಂದರೂ ನಮಗೆ ಒದಗಿ ಬಂದಂತಹ ವಾಗ್ದಾನಗಳಿಗೆ ಅಂಟಿಕೊಳ್ಳುವದು ಅವಶ್ಯವಿದೆ, "ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು

ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ" (ರೋಮಾಪುರ 8:28).

ಯಾಕೆ ಸಂಗತಿಗಳು ಹಾಗೆ ಸಂಭವಿಸುತ್ತವೆ ಎಂಬುದನ್ನು ನಾವು ಯಾವಾಗಲೂ ಅರ್ಥೈಸಿಕೊಳ್ಳಬೇಕಾಗುತ್ತದೆ ಎಂದು ನಾನು ಹೇಳಲಾರೆನು, ಆದರೆ ದುಷ್ಟತನದಿಂದ ಒಳ್ಳೇಯದು ಬರುವುದನ್ನು ದೇವರು ಮಾಡುವವನಾಗಿದ್ದಾನೆ ಎಂಬುದನ್ನು ನೆನಿಪಿಸಲು ಇದು ಸಹಾಯಿಸುವುದಾಗಿದೆ. ನಾವು ನೋಡುವವರಾಗಿ ನಡೆಯದೆ ನಂಬುವವರಾಗಿ ನಡೆಯುವದು ಅಷ್ಟೊಂದು ಸರಳವಲ್ಲ (ನೋಡಿರಿ 2 ಕೊರಿಂಥ 5:7), ಆದರೆ ದೇವರು ಇನ್ನೂ ಸಿಂಹಾಸನದ ಮೇಲಿದ್ದಾನೆ; ಆತನು ಇನ್ನೂ ಎಲ್ಲವುಗಳ ಮೇಲೆ ತನ್ನ ನಿಯಂತ್ರಣ ಸಾಧಿಸಿದ್ದಾನೆ.

**2. ದೇವರ ವಾಕ್ಯವು – ನಿಶ್ಚಿತವಾದದ್ದು.**

ಈ ಪಾಠದ ಎಲ್ಲಾ ಓದುಗರು ದೇವರ ವಾಕ್ಯವು ನಿಶ್ಚಿತವಾದದ್ದು ಎಂದು ಕಲಿಯಬೇಕೆಂದು ಪರಿಶುದ್ಧಾತ್ಮನು ಬಯಸುವವನಾಗಿದ್ದಾನೆ. 2 ಅರಸು 8-10 ಉದ್ದಕ್ಕೂ, ಪದೇ ಪದೇ ದೇವರ ವಾಕ್ಯವು ಸದೃಷ್ಯವಾಯಿತು ಅಲ್ಲಿ ಗಮನಿಸಲ್ಪಟ್ಟಿದೆ. ಬೆನ್ಹದದನು ಮರಣಿಸುವನು ಎಂದು ದೇವರ ಪ್ರವಾದಿಯ ಆದ ಎಲೀಷನು ಮುಂತಿಳಿಸಿದನು (8:10), ಮತ್ತು ಆತನು ಮಡಿದನು (8:15), ಎಲೀಷನು ಹಜಾಯೇಲನು ಅರಾಮ್ಯದ ಅರಸನಾಗುವನು ಎಂದು ಮುಂತಿಳಿಸಿದ್ದನು (8:13), ಮತ್ತು ಅದನ್ನು ಮಾಡಿದನು (8:15). ಹಜಾಯೇಲನು ಇಸ್ರಾಯೇಲಿನ ಮೇಲೆ ಮಾಡುವ ಅತ್ಯಾಚಾರಗಳ ಬಗೆಗೆ ಎಲೀಷನು ಹೇಳಿದ್ದನು (8:12), ಮತ್ತು ಪ್ರವಾದಿಯು ಮುಂತಿಳಿಸಿದ ಹಾಗೆಯೇ ಸಂಭವಿಸಿತು (ನೋಡಿರಿ 10:32, 33; 13:3, 22). ನಾಬೋತನ ರಕ್ತವು ಆತನಿಂದ ದ್ರಾಕ್ಷೆತೋಟವನ್ನು ತೆಗೆದುಕೊಂಡ ಸ್ಥಳದಲ್ಲಿಯೇ ಮುಯ್ಯಿ ತೀರಿಸಿಕೊಳ್ಳುವದು (1 ಅರಸು 21:19), ಮತ್ತು ಅದಾಯಿತು (2 ಅರಸು 9:21, 25, 26). ಎಲೀಯನು ಅಹಾಬನಿಗೆ ಆತನ ಎಲ್ಲಾ ಸಂತತಿಯವರು ನಾಶವಾಗುವರು ಎಂದು ಹೇಳಿದನು (1 ಅರಸು 21:21), ಮತ್ತು ಈ ಪ್ರವಾದನೆಯು ಸಿದ್ಧವಾಯಿತು (2 ಅರಸು 10:17).

ಹೀಗಿದ್ದಾಗ್ಯೂ ಯೇಹುವು ಈ ಹೇಳಿಕೆಯನ್ನು ಮಾಡುವಾಗ ದುರುದ್ದೇಶವನ್ನು ಹೊಂದಿದ್ದನು, "ಭೂಮಿಯು ಅಳಿದುಹೋದರೂ ದೇವರ ವಾಕ್ಯವು ಅಳಿಯದು ..." (2 ಅರಸು 10:10) ಎಂದು ಆತನು ಹೇಳಿದುದರಲ್ಲಿಯೂ ಆತನು ಇನ್ನೂ ಸತ್ಯವನ್ನೇ ಮಾತನಾಡುತ್ತಿದ್ದಾನೆ. "ಭೂಮಿಯು ಅಳಿದರೂ" ಎಂಬುದು "ನಾಶವಾದರೂ" ಅಥವಾ "ಏನೂ ಇಲ್ಲವಾದರೆ" ಎಂದಾಗಿದೆ. NIVಯಲ್ಲಿ "ಯೆಹೋವನು ಮಾತನಾಡದೇ ಇಲ್ಲದ ಮಾತುಗಳು ... ವಿಫಲವಾ ಗುವವು" ಎಂದಿದೆ.

ಯೆಹೋವನು ಯಾವುದಾದರೂ ಸಂಭವಿಸುವದು ಎಂದು ಹೇಳಿದ್ದಾದರೆ ಅದು ಸಂಭವಿಸುವದು ಎಂದು 2 ಅರಸು 8-10 ಸ್ಪಷ್ಟಪಡಿಸುತ್ತದೆ. ದೇವರ ವಾಕ್ಯವು ಸಂಪೂರ್ಣತೆಯ, ನಿಶ್ಚಿತವಾಗಿ ಕೆಟ್ಟತನದ ಎಲ್ಲಾ ಶಕ್ತಿಯು ವಿರುದ್ಧವಾಗಿ ಹೋಗೆಯಾಡುವದು ದುಷ್ಟರು ಅಳುವರು ಯಾಕೆಂದರೆ ಇದು ನಿಜವಾಗಿದೆ (ನೋಡಿರಿ ಮತ್ತಾಯ 7:13, 14; 1 ಕೊರಿಂಥ 6:9, 10; 16:22; ಗಲಾತ್ಯ 5:19-21). ದೇವ ಜನರು ಸಂತೋಷಿಸುವರು ಯಾಕೆಂದರೆ ಇದು ನಿಶ್ಚಿತವಾದದ್ದಾಗಿದೆ (ನೋಡಿರಿ ಯೆಶಾಯ 1:18; ಯೋಹಾನ 14:1-3; 1 ಯೋಹಾನ 1:7; 3:2).

**3. ಪಾಪದ ಪರಿಣಾಮಗಳು ಭಯಂಕರವಾದವುಗಳು.**

2 ಅರಸು 8-10ರ ಗಮನ ಸೆಳೆಯುವ ಸಂದೇಶವೆಂದರೆ ಪಾಪದ ಪರಿಣಾಮಗಳು ಭಯಂಕರವಾದವುಗಳು ಆಗಿವೆ. ಸೈತಾನನು, ಅವಿಧೇಯತೆಯ ಮಾರ್ಗವು ಆಕರ್ಷಕವಾಗಿ ಕಾಣುವಂತೆ ಮಾಡುತ್ತಾನೆ; ಆದರೆ ಕೊನೆಯಲ್ಲಿ, "ದ್ರೋಹಿಗಳ ಮಾರ್ಗವು ಕಷ್ಟದಾಯಕವಾ

ದದ್ದು" (ಜ್ಞಾನೋಕ್ತಿ 13:15; KJV). "ಮನುಷ್ಯನ ದೃಷ್ಟಿಗೆ ಸರಳವಾಗಿ ತೋರುವ ಒಂದು ಮಾರ್ಗವುಂಟು; ಕಟ್ಟಕಡೆಗೆ ಅದು ಮರಣಮಾರ್ಗವೇ" (ಜ್ಞಾನೋಕ್ತಿ 16:25). ವಿಚಾರಾತ್ಮಕ ವ್ಯಕ್ತಿಗಳು ಗಲಾತ್ಯ 6:7, 8ರಲ್ಲಿನ "... ಮಾನವನು ತಾನು ಏನನ್ನು ಬಿತ್ತುವನೋ ಅದನ್ನೇ ಕೊಯ್ಯಬೇಕು. ಶರೀರಭಾವವನ್ನು ಕುರಿತು ಬಿತ್ತುವವನು ಶರೀರಾಭಾವದಿಂದ ನಾಶನವನ್ನು ಕೊಯ್ಯುವನು" ಎಂಬ ಸತ್ಯವನ್ನು ಕಂಡುಕೊಳ್ಳುವರು.

ಪಾಪವು ಭಯಂಕರವಾದ ಪರಿಣಾಮವನ್ನು ತರುವ ವಾಸ್ತವವನ್ನು ಸಮಯದಿಂದ ಸಮಯಕ್ಕೆ ಸ್ಪುಟವಾದ ಉದ್ದೇಶಗಳುಳ್ಳ ಪಾಠಗಳನ್ನು ಮನುಷ್ಯನ ಮನದ ಮೇಲೆ ಪ್ರಭಾವ ಬೀರಲು ದೇವರು ಕೊಡುವವನಾಗಿದ್ದಾನೆ - ಇದು ಕೇವಲ ಪಾಪಿಗಳಿಗೆ ಮಾತ್ರವಲ್ಲ ಆದರೆ ಇತರರಿಗೂ ಕೂಡ ಆಗಿದೆ. ಸಾವಿರಾರು ತಿರುಗಿಬಿದ್ದ ಆತ್ಮಗಳು ಮತ್ತು ಅವರ ಕುಟುಂಬಗಳು ಪ್ರಳಯದಲ್ಲಿ ಕೊಚ್ಚಿಹೋದದ್ದರ ಬಗೆಗೆ ಯೋಚಿಸಿರಿ. ಸೋದೋಮ ಮತ್ತು ಗೋಮೋರಗಳ ನಾಶನವನ್ನು ಪರಿಗಣಿಸಿರಿ, ವಿನಾಶವು ಹೀಗೆ ಎರಡು ಪಟ್ಟಣಗಳನ್ನು ಸಂಪೂರ್ಣವಾಗಿ ಶೂನ್ಯವಾಗಿಸಿತು. ಐಗುಪ್ತದ ಚೊಚ್ಚಲ ಗಂಡುಮಕ್ಕಳ ಸಂಹಾರವು ಮತ್ತು ಕೆಂಪು ಸಮುದ್ರದಲ್ಲಿ ಇಸ್ರಾಯೇಲ್ಯರನ್ನು ಬೆನ್ನಟ್ಟಿಬಂದ ಅಹಾಬನ ಕುಟುಂಬ ಮತ್ತು ಬಾಳನ ಆರಾಧಕರ ನಾಶನಗಳು ದೇವರು ಅವಿಧೇಯತೆಯನ್ನು ಹಗುರವಾಗಿ ತೆಗೆದುಕೊಳ್ಳಲಾರನು ಎಂಬ ನೆನಪನ್ನು ಸೇರಿಸುವುದಾಗಿದೆ.

2 ಅರಸು 8-10 ಭಾಗವು ನಮ್ಮ ಹೃದಯ ಮತ್ತು ಜೀವಿತಗಳನ್ನು ಪರೀಕ್ಷೆಗೆ ಒಳಪಡಿಸಬೇಕು. ಅಲ್ಲಿ ನಾವು ಪಾಪ ಮತ್ತು ತಿರುಗಿಬೀಳುವುದನ್ನು ಕಂಡಿದ್ದಾದರೆ, ತಕ್ಷಣವೇ ಪಶ್ಚಾತ್ತಾಪಪಟ್ಟು ದೇವರೆಡೆಗೆ ತಿರುಗಿಕೊಳ್ಳುವ ಅವಶ್ಯಕತೆಯು ನಮಗಿದೆ!

### 4. ನಮ್ಮ ಹೃದಯಗಳು ತಟ್ಟಲ್ಪಡಬೇಕು.

ನಾಲ್ಕನೆಯ ಸತ್ಯವು ನಮ್ಮ ಪಾಠದ ವಸ್ತುವಾದ "ಅತ್ತಂತಹ ಮನುಷ್ಯನು" ಎಂಬದರೆಡೆಗೆ ನಮ್ಮನ್ನು ತರುವುದಾಗಿದೆ. ಅನೇಕ ವರ್ಷಗಳಿಂದ, ಅವರು ದೇವರನ್ನು ತ್ಯಜಿಸಿದರು ಮತ್ತು ತಮ್ಮ "ದೇವರ" ಹಿಂದೆ ಹೋದರು. ಅವರ ದುಷ್ಟತ್ವಕ್ಕೆ ಯಾವ ಮಿತಿಯೂ ಇರಲಿಲ್ಲ ಎಂದು ಅಲ್ಲಿ ಕಂಡು ಬರುತ್ತದೆ. ಅವರನ್ನು ಹಿಂದಕ್ಕೆ ಕರೆಯಲು ದೇವರು ಪ್ರವಾದಿಗಳನ್ನು ಕಳುಹಿಸಿದರೂ, ಅವರು ದೇವರ ಪ್ರವಾದಿಗಳನ್ನು ಅಪಹಾಸ್ಯ ಮಾಡಿದರು ಮತ್ತು ಅವರಲ್ಲಿನ ಅನೇಕರನ್ನು ಕೊಂದರು. ಅವರು ಕಠಿಣವಾದ ಶಿಕ್ಷೆಯನ್ನು ಗಳಿಸಿದರು. ಹಾಗಿದ್ದಾಗ್ಯೂ, ಎಲೀಷನು ಅವರ ಹಣೆಬರಹವನ್ನು ತಿಳಿದಿದ್ದನು (8:12), ಆದರೆ ಆತನು ಅದನ್ನು ಸಂತೋಷದಿಂದ "ಇದೇ ಆ ಸಮಯವಾಗಿದೆ! ಅವರು ತಾವೇನು ಹೊಂದಬೇಕಾದದ್ದನ್ನು ಹೊಂದಿದ್ದರು" ಎಂದು ಹೇಳಲಿಲ್ಲ. ಬದಲಾಗಿ, "ದೇವರ ಆ ಮನುಷ್ಯನು ಅತ್ತನು" (8:11).

ಒಂದು ಕ್ಷಣದ ಹಿಂದೆ, ನಾನು ಪಾಪದ ಪರಿಣಾಮಗಳನ್ನು ಸೂಚಿಸಿದ್ದೇನೆ. ಆ ಪರಿಣಾಮಗಳಲ್ಲಿ ಕೆಲವು ಈ ಜಗತ್ತಿನಲ್ಲಿವೆ (ನೋಡಿರಿ 1:27ಬಿ); ಜಗತ್ತಿನಲ್ಲಿನ ಹೆಚ್ಚಿನವು ಇನ್ನೂ ಬರಬೇಕಾಗಿವೆ (ಪ್ರಕಟನೆ 20:11-15). ದುಷ್ಟರು "ತಾವು ಬಿತ್ತಿದನ್ನು ಬೆಳೆಯುವಂತೆ" ಕಷ್ಟಪಡುತ್ತಾರೆ ಎಂಬುದನ್ನು ನಾವು ನೋಡುತ್ತೇವೆ (ನೋಡಿರಿ ಗಲಾತ್ಯ 6:7, 8), ಅಥವಾ ಅವಿಧೇಯತೆಯ ನಿತ್ಯಶಿಕ್ಷೆಯ ಬಗೆಗೆ ನಾವು ಓದುವಾಗ (ಮತ್ತಾಯ 7:21-23; 8:12; ಮಾರ್ಕ 9:47, 48; ಪ್ರಕಟಣೆ 21:8), ನಮ್ಮ ಪ್ರತಿಕ್ರಿಯೆಯು ಏನು? ನಾವು ಸಂತುಷ್ಟವುಳ್ಳವರಾಗಿರುತ್ತೇವೆಯೋ ಅಥವಾ ದುಃಖಿತರಾಗುತ್ತೇವೆಯೋ? ಇಸ್ರಾಯೇಲ್ಯರ ಐಹೀಕವಾದ ಶಿಕ್ಷೆ ಯನ್ನು ಗಣನೆಗೆ ತೆಗೆದುಕೊಂಡು ಅತ್ತಿದ್ದಾದರೆ, ಪ್ರತಿದಿನ ನಾವು ಮಾಡುವಂತವುಗಳಿಗೆ ಯೋಗ್ಯವಾದ ನಿತ್ಯಶಿಕ್ಷೆಯನ್ನು ನಾವು ಪಡೆಯುವಾಗ ನಾವು ಎಷ್ಟು ಅಳಬೇಕಾಗುವದು!

ಪಾಸ್ಟರ್ ಇಲ್ಲದ ಚರ್ಚವೊಂದಿತ್ತು. ಅವರು ಕೆಲ ಜನರನ್ನು ಪ್ರಸಂಗಿಸಲು ಆಹ್ವಾನಿಸಿದ್ದರು. ಒಂದು ಬಾನುವಾರ, ಒಬ್ಬ ಮನುಷ್ಯನು ಬಂದು ನರಕದ ಬಗೆಗೆ ಬೋಧಿ

ಸಿದನು. ಮುಂದಿನ ಭಾನುವಾರ, ಇನ್ನೊಬ್ಬ ಮನುಷ್ಯನು ಬಂದನು ಮತ್ತು ಆತನ ಪ್ರಸಂಗವೂ ಸಹ ನರಕದ ಬಗೆಗೆ ಆಗಿತ್ತು. "ನಂತರ ಕೆಲವರು ನರಕಕ್ಕೆ ಹೋಗುತ್ತಿದ್ದಾರೆ ಎಂದು ಹೇಳಿದನು ಮತ್ತು ಆತನು ಸಂತೋಷಿಸಿದನು. ಎರಡನೆಯ ಬೋಧಕನು ಜನರು ನರಕಕ್ಕೆ ಹೋಗುತ್ತಿದ್ದಾರೆ ಎಂದು ಹೇಳಿದನು ಮತ್ತು ಆತನು ದುಃಖಿತನಾದನು. ನಾವೆಲ್ಲ ಎರಡನೆಯ ಬೋಧಕನನ್ನೇ ಬಯಸಿದೆವು."

ಎಲ್ಲೋ ಒಂದೆಡೆ: "A Dry-Eyed Church in a Hell-Bent World" ಈ ರೀತಿಯಲ್ಲಿ ಶೀರ್ಷಿಕೆಯಿರುವ ಉಪನ್ಯಾಸವನ್ನು ನಾನು ನೋಡಿದೆನು. ನಮ್ಮ ಸುತ್ತಲೂ ವಿಚಾರದಿಂದ ನರಕದೊಳಕ್ಕೆ ಧಾವಿಸುವವರನ್ನು ನೋಡಿಯೂ ಸ್ಥಬ್ಧರಾಗಿರುವುದಕ್ಕೆ ಸಾಧ್ಯವೇ? ಯೇಸು ಯೆರೂಸಲೇಮಿನತ್ತ ನೋಡುವಾಗ ಅದು ಆತನನ್ನು ತಿರಸ್ಕರಿಸಿದ ಪಟ್ಟಣವಾಗಿತ್ತು, ಅದು ಆತನನ್ನು ಶಿಲುಬೆಗೇರಿಸಿದ ಪಟ್ಟಣವಾಗಿತ್ತು, ಆದರೂ ಸಹ ಆ ಪಟ್ಟಣವು ನಾಶವಾಗುವುದೆಂದಾಗ ಆತನು ಅತ್ತನು (ಲೂಕ 19:41-44; ನೋಡಿರಿ ಮತ್ತಾಯ 23:37, 38). ಪೌಲನು ಕೊರಿಂಥ ಸಭೆಯವರಿಗೆ ಬರೆಯುವಾಗ ಆ ಸಭೆಯು ಊಹಿಸಲಾಗದಂಥಹ ಸಮಸ್ಯೆಗಳಿಂದ ತುಂಬಿತ್ತು ಅದಕ್ಕಾಗಿ ಆತನು ಅತ್ತನು (2 ಕೊರಿಂಥ 2:4). ಆತನು ಅವರಿಗೆ "ಯಾವನಾದರೂ ಪಾಪದಲ್ಲಿ ಸಿಕ್ಕಿಕೊಂಡರೆ ನಾನು ತಾಪಪಡುವುದಿಲ್ಲವೋ?" (2 ಕೊರಿಂಥ 11:29ಬಿ).

ನಾವು ಕಳೆದು ಹೊದವರಿಗಾಗಿ ಕಾಳಜಿಯುಳ್ಳವರಾಗಿದ್ದೇವೆಯೋ? ನಮಗೆ ನಿಜವಾಗಿ ಕಾಳಜಿ ಇದ್ದರೆ, ನಾವು ನೆವ ಹೇಳುವುದನ್ನು ನಿಲ್ಲಿಸಿಬಿಡುತ್ತೇವೆ ಮತ್ತು ಇತರರಿಗಾಗಿ ಸುವಾರ್ತೆಯನ್ನು ಕೊಡುವುದನ್ನು ಪ್ರಾರಂಭಿಸಬೇಕು. ಇದು ಮಾತ್ರ ಅವರ ಒಂದೇ ನಿರೀಕ್ಷೆಯಾಗಿದೆ (ರೋಮಾಪುರ 1:16)!

## ಮುಕ್ತಾಯ

ದುರಂತದ ಘಟನೆಯ ದೊಡ್ಡ ದುರಂತವೆಂದರೆ ನಾವು ಅದರಿಂದ ಏನನ್ನು ಕಲಿಯದೆ ಹೋದಾಗ ಮತ್ತು ಸುಧಾರಿಸದೆ ಇದ್ದಾಗಲೇ. 2 ಅರಸು 8-10 ರಲ್ಲಿನ ದುರಂತಗಳಿಂದ ನಾಲ್ಕು ಮೂಲ ಸತ್ಯಗಳನ್ನು ನಾವು ಸೆಳೆಯಬಹುದಾಗಿದೆ: 1) ದೇವರು ಇನ್ನೂ ಎಲ್ಲದರ ಮೇಲೆ ನಿಯಂತ್ರಣದಲ್ಲಿದ್ದಾನೆ: ನಾವು ಶಾಂತರಾಗಿರಬೇಕು. 2) *ದೇವರ ವಾಕ್ಯವು ನಿಶ್ಚಿತವಾದದ್ದು:* ನಾವು ಭರವಸೆಯುಳ್ಳವರಾಗಿರಬೇಕು. 3) *ಪಾಪದ ಪರಿಣಾಮಗಳು ಭಯಂಕರವಾದವುಗಳು:* ನಾವು ಎಚ್ಚರಿಕೆಯುಳ್ಳವರಾಗಿರಬೇಕು. 4) *ನಮ್ಮ ಹೃದಯವು ತಟ್ಟಲ್ಪಡಬೇಕು:* ನಾವು ಇತರರ ಕುರಿತು ಕಾಳಜಿ ವಹಿಸುವ ಅವಶ್ಯಕತೆಯು ಇದೆ.

ಈಗ ನನ್ನ ಪ್ರಶ್ನೆ ಎಂದರೆಈ ಸತ್ಯಗಳನ್ನು ನಾವು ಕಲಿಯುತ್ತೇವೆಯೋ? ಬಲು ಮುಖ್ಯವಾದದ್ದೆಂದರೆ ನಮ್ಮ ಜೀವಿತವು ಒಳ್ಳೇಯ ಫಲಿತಾಂಶವನ್ನು ತರಬಹುದೇ?

---

ಟಿಪ್ಪಣಿಗಳು

[1]ಕೆಲ ಪ್ರಾಚೀನ ಹಸ್ತಪ್ರತಿಗಳಲ್ಲಿ "ನೀನು ಖಚಿತವಾಗಿ ಸ್ವಸ್ಥನಾಗಲಾರಿ" ಎಂದಿದ್ದು ಆದರೆ ಓದುವಾಗ "ನೀನು ಖಚಿತವಾಗಿ ಸ್ವಸ್ಥನಾಗುವಿ" ಎಂಬುದು ಸಹ ಬಳಕೆಯಾಗಬಹುದಾಗಿದೆ ಅದನ್ನೇ ನಾವು ಬಳಿಕೆ ಮಾಡುವದು ಉಚಿತ (J. Robert Vannoy, notes on 2 Kings, *The NIV Study Bible*, ed. Kenneth Barker [Grand Rapids, Mich.: Zondervan Publishing House, 1985], 537). [2]James Burton Coffman and Thelma B. Coffman, *Commentary on Second Kings*, James Burton Coffman Commentaries, The Historical Books, vol. 6 (Abilene, Tex.: A.C.U. Press, 1992), 100-102. [3]Warren W. Wiersbe, *Be Distinct* (Colorado Springs, Colo.: Victor, 2002), 61. [4]Coffman ರವರು, "ಇಂದಿನ ದಿನಗಳಲ್ಲಿಯೂ ಕೂಡಾ ಆ ತರದಂತಹ ಯುದ್ಧ

ದಂತಹ ಸಂಗತಿ ಗಳು ಇಲ್ಲ" ಎಂದು ಸೇರಿಸಿದ್ದಾರೆ (Coffman, 103). [5]Donald J. Wiseman, *1 and 2 Kings: An Introduction and Commentary*, Tyndale Old Testament Commentaries (Downers Grove, Ill.: Inter-Varsity Press, 1993), 214. [6]ಕೆಲವರು ನಂಬುವುದೇನೆಂದರೆ, ಆಗ, ಎಲೀಷನು ಹಜಾಯೇಲನನ್ನು ಎಣ್ಣೆಯಿಂದ ಅಭಿಷೇಕಿಸಿದನು ಎಂದು; ಆದರೆ ಅಂಥ ಸಂಗತಿಗಳು ನೆರವೇರಿದ ಸೂಚನೆಯು ಎಲ್ಲಿಯೂ ಇಲ್ಲ. ಹಜಾಯೇಲನ "ಅಭಿಷೇಕವು" ಬಹುಶಃ ಎಲೀಷನು ತಾನೇ ಸ್ವೀಕರಿಸಿದಂತಿದೆ: ಯೆಹೋವನ ಉದ್ದೇಶವನ್ನು ಪೂರ್ಣಗೊಳಿಸಲು "ಮೀಸಲಾಗಿಡುವುದು" (ಮಾತಿನ ಮೂಲಕ ಅಥವಾ ಕೃತ್ಯದ ಮೂಲಕ) ಆಗಿದೆ. [7]Wiseman, 214. [8]ರಬ್ಬಿಯರ ಒಂದು ಕಲ್ಪನೆಯ ಪ್ರಕಾರ ಕರೆಯಲ್ಪಡುವದೆಂದರೆ, [ಸೇವಕ] "ಯೋನನು ಅಮಿತ್ತೈಯ ಮಗನು" ಎಂದು ಸಂಪ್ರದಾಯವು ಹೇಳಲ್ಪಡುತ್ತದೆ (G. Rawlinson, "2 Kings," *The Pulpit Commentary*, vol. 5, *1 & 2*, ed. H. D. M. Spence and Joseph S. Exell [Grand Rapids, Mich.: Wm. B. Eerdmans Publishing Co., 1950], 188). [9]ಕೆಲವರು "ಕ್ಷೇಮವೋ?" ಎಂಬ ಪದಗಳನ್ನು ಸಂಧಾನಕ್ಕೆ ಪ್ರಯತ್ನಿಸುವದು ಎಂದು ನೋಡುತ್ತಾರೆ, ಆದರೆ ಅದರ ಹಿಂದಿನ ಮಾತುಗಳು ಆ ಪ್ರಶ್ನೆಯ ವ್ಯಂಗ್ಯದ ದಾಟಿಯನ್ನು ಸೂಚಿಸುವುದಾಗಿದೆ. [10]ಈಜೆಬೆಲಳು ಹೂಣಲ್ಪಡುವುದಿಲ್ಲ ಎಂದು ಪ್ರವಾದಿ ಮಂಡಲಿಯವರು ಹೇಳಿದುದ್ದನ್ನು ಮರೆತು ಬಿಟ್ಟಿರಾ? (ನೋಡಿರಿ 2 ಅರಸು 9:10.)